ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೯೭

ಪಟ್ಟಿ – ೦೬

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತ ಮೂರನೇ ಅಧಿವೇಶನ

ಮಂಗಳವಾರ, ದಿನಾಂಕ : ೨೩ನೇ ಜುಲೈ, ೨೦೨೪

---

## ಸಮೂಹ – II

೧. ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

೨. ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

೩. ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

೪. ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

೫. ಪೌರಾಡಳಿತ ಹಾಗೂ ಹಜ್ ಸಚಿವರು

೬. ಸಹಕಾರ ಸಚಿವರು

೭. ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

---

# ತೋಟಗಾರಿಕೆ ಇಲಾಖೆಯಲ್ಲಿ ಬರುವ ವಿವಿಧ ಯೋಜನೆಗಳ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೬೫೫ (೮೦೮) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತೋಟಗಾರಿಕೆ ಇಲಾಖೆಯಲ್ಲಿ ಬರುವ ಪ್ರಸ್ತುತ ಯೋಜನೆಗಳಾವುವು ; ಸದರಿ ಯೋಜನೆಗಳು ಯಾವ ಯಾವ ರೀತಿಯ ಫಲಾನುಭವಿಗಳಿಗೆ ತಲುಪುತ್ತಿವೆ ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಆ) ಮಲೆನಾಡು ಭಾಗಗಳಲ್ಲಿ ಅಡಿಕೆ ಬೆಳೆಗೆ ಹಳದಿ ರೋಗ ಬರುತ್ತಿದ್ದು, ಅದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ತೋಟಗಾರಿಕೆ ಇಲಾಖೆಯಿಂದ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ಶ್ರೀಗಂಧ ಕೃಷಿಗೆ ಯಾವ ಯಾವ ರೀತಿಯ ಸಹಾಯಧನವನ್ನು ಸರ್ಕಾರ ನೀಡುತ್ತಿದೆ ; ರೈತರು ಶ್ರೀಗಂಧ ಕೃಷಿಯನ್ನು ಮಾಡಲು ಇರುವ ಷರತ್ತು, ನಿಬಂಧನೆಗಳು ಯಾವುವು ; ಶ್ರೀಗಂಧ ಗಿಡಗಳಿಗೆ ಸರ್ಕಾರದಿಂದ ನಿಗದಿಪಡಿಸಿರುವ ಬೆಲೆ ಎಷ್ಟು ಮತ್ತು ಎಲ್ಲೆಲ್ಲಿ ಖರೀದಿಸಲು ಅವಕಾಶ ಕಲ್ಪಿಸಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ತೋಟಗಾರಿಕೆ ಇಲಾಖೆಯು ಹನಿ ನೀರಾವರಿ ಅಳವಡಿಕೆ ಮಂಜೂರಾತಿ ಪ್ರಕ್ರಿಯೆಯು ಈಗ ಯಾವ ಹಂತದಲ್ಲಿದೆ ; ಹನಿ ನೀರಾವರಿ ಅಳವಡಿಕೆಗೆ ಮಂಜೂರು ಮಾಡಲು ಇರುವ ಮಾನದಂಡಗಳಾವುವು ? (ಸಂಪೂರ್ಣ ವಿವರದೊಂದಿಗೆ ಮಾಹಿತಿ ನೀಡುವುದು)

## ನವ ನಗರೋತ್ಥಾನ ಯೋಜನೆ ಕುರಿತು

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೬೫೬ (೭೯೧) ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆಗೆ ಕಳೆದ ೧೫ ತಿಂಗಳಿನಿಂದ ಅನುದಾನ ಬಿಡುಗಡೆ ಮಾಡದಿರಲು ಕಾರಣಗಳೇನು ;

(ಆ) ಹಿಂದಿನ ಸರ್ಕಾರದ ಅವಧಿಯಲ್ಲಿ ಅಮೃತ ನಗರೋತ್ಥಾನ ಯೋಜನೆಯಡಿ ಒದಗಿಸಿದ್ದ ೮೧೪೪ ಕೋಟಿ ರೂ. ಪೈಕಿ ೪೮೮೫ ಕೋಟಿ ವೆಚ್ಚದ ಕಾಮಗಾರಿಗಳನ್ನು ಪ್ರಸ್ತುತ ಸರ್ಕಾರವು ಕೈಬಿಡಲು ಕಾರಣಗಳೇನು ;

(ಇ) ಇದರ ಪರಿಣಾಮ ಅನೇಕ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು?

## ಜಿಲ್ಲಾ ಕೇಂದ್ರಗಳ ವಾರ್ಡ್‌ಗಳ ಕುರಿತು

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೬೫೭ (೭೯೨) ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಎಲ್ಲಾ ಜಿಲ್ಲೆಗಳ ವಾರ್ಡ್‌ಗಳನ್ನು ಹೆಚ್ಚಿಸಲು ಸರ್ಕಾರದ ಮುಂದಿರುವ ಮಾನದಂಡಗಳೇನು ; (ಬೆಂಗಳೂರು ಹೊರತುಪಡಿಸಿ ವಿವರ ನೀಡುವುದು)

(ಆ) ಜಿಲ್ಲಾ ಕೇಂದ್ರಗಳಲ್ಲಿ ವ್ಯಾಪ್ತಿ ಮೀರಿ ಬಡಾವಣೆಗಳು ನಿರ್ಮಾಣವಾಗಿದ್ದು ಜನ ಸಂಖ್ಯೆ ಅನುಗುಣವಾಗಿ ವಾರ್ಡ್‌ಗಳನ್ನು ಹೆಚ್ಚಿಸಲು ಸರ್ಕಾರದ ಮುಂದಿರುವ ಸವಾಲುಗಳೇನು ;

(ಇ) ಶಿವಮೊಗ್ಗ ನಗರ ದಿನೇ ದಿನೇ ವೇಗವಾಗಿ ಬೆಳೆಯುತ್ತಿದ್ದು ಹೆಚ್ಚಿನ ಬಡಾವಣೆಗಳು ನಿರ್ಮಾಣವಾಗಿ, ನಗರದಲ್ಲಿ ಜನ ಸಂಖ್ಯೆ ಹೆಚ್ಚುತ್ತಿರುವುದರಿಂದ, ಜನರಿಗೆ ಮೂಲಭೂತ ಸೌಲಭ್ಯಕ್ಕೆ ತೊಂದರೆ ಆಗದಂತೆ ವಾರ್ಡ್‌ಗಳನ್ನು ಹೆಚ್ಚಿಸಲು ಸರ್ಕಾರಕ್ಕೆ ಬೇಡಿಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಬಗ್ಗೆ ಕೈಗೊಳ್ಳಲಾದ ಕ್ರಮಗಳೇನು ?

## ವಿಮಾನ ನಿಲ್ದಾಣಗಳ ನೈಟ್ ಲ್ಯಾಂಡಿಂಗ್ ಕುರಿತು

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೬೫೮ (೭೯೩) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ವಿಮಾನ ನಿಲ್ದಾಣಗಳಲ್ಲಿ ಕಳೆದ ೫ ವರ್ಷಗಳಲ್ಲಿ ಪ್ರಯಾಣಿಕರ ಓಡಾಟದ ಸಾಂದ್ರತೆ ಎಷ್ಟಿದೆ ; (ವಿವರ ನೀಡುವುದು)

(ಆ) ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ ನೈಟ್ ಲ್ಯಾಂಡಿಂಗ್ ಏಕೆ ತಡವಾಗುತ್ತಿದೆ ; ಯಾವ ತಾಂತ್ರಿಕ ಸಮಸ್ಯೆ ಇದೆ, ಸಮಸ್ಯೆ ಪರಿಹಾರಕ್ಕೆ ಬೇಕಾದ ಹಣಕಾಸು ಎಷ್ಟು ; ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ ಯಾವಾಗ ನೈಟ್ ಲ್ಯಾಂಡಿಂಗ್ ಪ್ರಾರಂಭವಾಗುವುದು ;

(ಇ) ರಾಜ್ಯದಲ್ಲಿ ಎಷ್ಟು ವಿಮಾನ ನಿಲ್ದಾಣಗಳಲ್ಲಿ ನೈಟ್ ಲ್ಯಾಂಡಿಂಗ್ ವ್ಯವಸ್ಥೆ ಇದೆ ; ನೈಟ್ ಲ್ಯಾಂಡಿಂಗ್‌ನ ಪ್ರಮುಖ ಉದ್ದೇಶವೇನು ?

## ಖಾಲಿ ಹುದ್ದೆ ಭರ್ತಿ ಮಾಡುವ ಬಗ್ಗೆ

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೬೫೯ (೭೯೯) ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯತಿಗಳಲ್ಲಿ ಮಂಜೂರಾದ/ಕಾರ್ಯನಿರ್ವಹಿಸುತ್ತಿರುವ/ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು, ಹುದ್ದೆವಾರು ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿನ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯತಿಗಳಲ್ಲಿ ಖಾಲಿಯಿರುವ ಹುದ್ದೆಗಳೆಷ್ಟು ; ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಕ್ರಮ ವಹಿಸಲಾಗಿದೆ ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಇ) ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿದ್ದಲ್ಲಿ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯತಿಗಳಲ್ಲಿ ಕಾಮಗಾರಿಗಳ ಅನುಷ್ಠಾನ, ಅಭಿವೃದ್ಧಿಯನ್ನು ಮಾಡುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಕ್ರಮವನ್ನು ಕೈಗೊಳ್ಳಲಾಗಿದೆ ? (ಸಂಪೂರ್ಣವಾದ ಮಾಹಿತಿ ನೀಡುವುದು)

## ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವ ಬಗ್ಗೆ

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೬೬೦ (೮೦೦) ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಹೊಸದಾಗಿ ಸ್ಥಾಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಕಳೆದ ೪ ವರ್ಷಗಳಿಂದ ಇಲ್ಲಿಯುವರೆಗೂ ಎಷ್ಟು ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸಲಾಗಿದೆ ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಇ) ಜಿಲ್ಲೆಯಲ್ಲಿ ಪ್ರಸ್ತುತ ಇರುವ ಸಣ್ಣ ಕೈಗಾರಿಕೆ ಕೇಂದ್ರವೆಷ್ಟು ; ಅವುಗಳನ್ನು ಅಭಿವೃದ್ಧಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ? (ಸಂಪೂರ್ಣವಾದ ಮಾಹಿತಿ ನೀಡುವುದು)

## ಶಿವಮೊಗ್ಗ ಜಿಲ್ಲೆಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬಗ್ಗೆ

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :-**

೬೬೧ (೮೩೭) ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯಲ್ಲಿ ಸಣ್ಣ ಕೈಗಾರಿಕೆ ಇಲಾಖಾ ವತಿಯಿಂದ ಅಭಿವೃದ್ಧಿ ಪಡಿಸಿರುವ ಸಣ್ಣ ಕೈಗಾರಿಕಾ ಪ್ರದೇಶಗಳೆಷ್ಟು ; ಅವುಗಳಲ್ಲಿ ಎಷ್ಟು ಜನ ಸಣ್ಣ ಕೈಗಾರಿಕಾಸಕ್ತರಿಗೆ ಅನುಕೂಲ ಮಾಡಿಕೊಡಲಾಗಿದೆ ;

(ಆ) ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸುವ ಉದ್ದಿಮೆಯವರಿಗೆ ಸರ್ಕಾರದ ಪ್ರೋತ್ಸಾಹಿಕ ಯೋಜನೆಗಳೇನು ;

(ಇ) ವಿಶೇಷತಃ ಸಣ್ಣ ಕೈಗಾರಿಕಾ ಇಲಾಖೆಯುವರು ಮಹಿಳಾ ಉದ್ದಿಮೆದಾರರಿಗೆ ಒದಗಿಸಿಕೊಡುತ್ತಿರುವ ಸೌಲಭ್ಯ ಸೌಕರ್ಯ ಮತ್ತು ಆರ್ಥಿಕ ಸಹಕಾರಗಳಾವುವು ?

## ಅಮೃತ ನಗರೋತ್ಥಾನ ಕಾಮಗಾರಿಗಳ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :-**

೬೬೨ (೮೩೮) ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಭದ್ರಾವತಿ ನಗರದ ರಸ್ತೆ ಅಗಲೀಕರಣ, ನಗರದ ಸೌಂದರ್ಯೀಕರಣಕ್ಕೆ ಹಾಗೂ ಕೆರೆಗಳ ಅಭಿವೃದ್ಧಿಗೆ ಸರ್ಕಾರದ ಯೋಜನೆಗಳೇನು ; ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ; (ವಿವರ ಒದಗಿಸುವುದು)

(ಆ) ಈ ನಗರದಲ್ಲಿ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–೪ ಯೋಜನೆಯಡಿಯಲ್ಲಿ ಬಾಕಿ ಇರುವ ಕಾಮಗಾರಿಗಳಾವುವು ; ಬಿಡುಗಡೆ ಮಾಡಲಾಗಿರುವ ಅನುದಾನ ಎಷ್ಟು ; (ವಿವರ ಒದಗಿಸುವುದು)

(ಇ) ಸದರಿ ಯೋಜನೆಯ ಅನುಷ್ಠಾನಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ; ಸದರಿ ಯೋಜನೆಯು ಯಾವ ಹಂತದಲ್ಲಿದೆ ; (ವಿವರ ಒದಗಿಸುವುದು)

(ಈ) ಸದರಿ ಯೋಜನೆಯನ್ನು ಯಾವ ಕಾಲಪರಿಮಿತಿಯೊಳಗೆ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲಾಗುವುದು ? (ಸಂಪೂರ್ಣ ಮಾಹಿತಿ ಒದಗಿಸುವುದು)

## ಶಿವಮೊಗ್ಗ ಜಿಲ್ಲೆಯ ಕೈಗಾರಿಕಾ ಅಭಿವೃದ್ಧಿ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೬೬೩ (೮೩೯) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಿವಮೊಗ್ಗ ಜಿಲ್ಲೆಯಲ್ಲಿ ಅಧಿಸೂಚನೆಯಾದ ಕೈಗಾರಿಕಾ ಪ್ರದೇಶಗಳು ಎಷ್ಟು ; (ವಿವರವಾದ ಮಾಹಿತಿ ನೀಡುವುದು)

(ಆ) ಈ ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕೆಗಳ ಸ್ಥಾಪನೆಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಇ) ಹಾಗಿದ್ದಲ್ಲಿ, ಯಾವ ಯಾವ ಕೈಗಾರಿಕೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ;

(ಈ) ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರದ ಕ್ರಮಗಳೇನು ; (ವಿವರವಾದ ಮಾಹಿತಿ ನೀಡುವುದು)

(ಉ) ಶಿವಮೊಗ್ಗ ಕೈಗಾರಿಕೆ ವಸಾಹತುಗಳ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಆರಂಭಿಸಿ ಈ ಭಾಗದ ಯುವಕರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಲು ಸರ್ಕಾರದ ಕ್ರಮಗಳೇನು ?

## ತೋಟಗಾರಿಕಾ ಇಲಾಖೆಯ ಕಾಮಗಾರಿ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :-**

೬೬೪ (೮೪೦) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ೩ ವರ್ಷಗಳಿಂದ ತೋಟಗಾರಿಕಾ ಇಲಾಖೆಯಿಂದ ವಿವಿಧ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು ; (ವಾರ್ಷಿಕವಾರು, ಲೆಕ್ಕ ಶೀರ್ಷಿಕೆವಾರು, ಅನುದಾನದ ವಿವರ ನೀಡುವುದು)

(ಆ) ಸದರಿ ಜಿಲ್ಲೆಯ ವ್ಯಾಪ್ತಿಯಲ್ಲಿ ತೋಟಗಾರಿಕಾ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ತೋಟಗಾರಿಕಾ ಕ್ಷೇತ್ರಗಳು/ ನರ್ಸರಿಗಳು ಯಾವುವು ;

(ಇ) ಸದರಿ ಕ್ಷೇತ್ರಗಳ ನರ್ಸರಿಗಳ ಅಭಿವೃದ್ಧಿ ನಿರ್ವಹಣೆಗೆ ವಿವಿಧ ಲೆಕ್ಕ ಶೀರ್ಷಿಕೆಯಡಿ ಬಿಡುಗಡೆಗೊಂಡ ಅನುದಾನವೆಷ್ಟು ; (ವಿವರ ನೀಡುವುದು)

(ಈ) ರೈತರಿಗೆ ಸಹಾಯಧನ ನೀಡಿ ತೋಟಗಾರಿಕಾ ಕ್ಷೇತ್ರವನ್ನು ಉತ್ತೇಜಿಸಲು ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳು ಯಾವುವು ?

## ಶಿವಮೊಗ್ಗ ಜಿಲ್ಲೆಯ ಮರಳು ಗಣಿಗಾರಿಕೆ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :-**

೬೬೫ (೮೪೧) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಮರಳು ಅಕ್ರಮ ಸಾಗಾಣಿಕೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು ; (ವಿವರ ಒದಗಿಸುವುದು)

(ಆ) ಶಿವಮೊಗ್ಗ ಜಿಲ್ಲೆಯ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ನೀಡಲಾಗಿದೆ ; (ವಿವರ ಒದಗಿಸುವುದು)

(ಇ) ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಅಕ್ರಮವಾಗಿ ಯಾವುದೇ ಪರವಾನಿಗೆ ಇಲ್ಲದೆ ಮರಳು ಸಾಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅಕ್ರಮ ಮರಳು ಸಾಗಾಣಿಕೆದಾರರ ವಿರುದ್ಧ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ? (ಸಂಪೂರ್ಣ ವಿವರ ಒದಗಿಸುವುದು)

## ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಕಾಲೇಜು ಅಧ್ಯಾಪಕರ ಹಾಗೂ ಶಾಲಾ ಶಿಕ್ಷಕರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಅಕ್ರಮವಾಗಿರುವ ಬಗ್ಗೆ

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) :–**

೬೬೬ (೭೭೧) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಕಾಲೇಜು ಅಧ್ಯಾಪಕರ ಹಾಗೂ ಶಾಲಾ ಶಿಕ್ಷಕರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಭಾರಿ ಅಕ್ರಮ ನಡೆದಿದ್ದು, ಈ ಬಗ್ಗೆ ೬ಳ ತನಿಕೆ ನಡೆಯುತ್ತಿದ್ದು, ಈ ಸೊಸೈಟಿ ಸದಸ್ಯರ ನ್ಯಾಯವಾದ ಹಕ್ಕುಗಳನ್ನು ಸರ್ಕಾರ ಕಾಪಾಡುವ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ ;

(ಆ) ಮೈಸೂರಿನಲ್ಲಿರುವ ಕೂಡಲ ಸಂಗಮ ದೇವಾ ಗೃಹ ನಿರ್ಮಾಣ ಸಹಕಾರ ಸಂಘ ಅಸ್ತಿತ್ವಕ್ಕೆ ಬಂದು ೧೪ ವರ್ಷಗಳಾಗಿದ್ದು, ಸದಸ್ಯರಿಂದ ಹಣ ಪಡೆದು ಇನ್ನೂ ನಿವೇಶನಗಳನ್ನು ಹಂಚಿಕೆ ಮಾಡದೆ ಸೊಸೈಟಿ ಅಧ್ಯಕ್ಷರು ಹಣ ದುರುಪಯೋಗ ಪಡಿಸಿಕೊಂಡಿದ್ದಾರೆಂಬ ದೂರು ಬಂದಿದ್ದು, ಇದರಿಂದ ಈ ಸೊಸೈಟಿ ಸದಸ್ಯರುಗಳಿಗೆ ಅನ್ಯಾಯವಾಗಿದ್ದು, ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

## ಬೆಂಗಳೂರಿನಲ್ಲಿ ಎರಡನೆಯ ವಿಮಾಣ ನಿಲ್ದಾಣ ಸ್ಥಾಪಿಸುವ ಕುರಿತು

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) :-**

೬೬೭ (೭೭೨) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರಿನ ಸಮೀಪ ಎರಡನೆಯ ವಿಮಾನ ನಿಲ್ದಾಣ ಸ್ಥಾಪಿಸುವ ಬಗ್ಗೆ ಸರ್ಕಾರದ ನೀತಿ ನಿಲುವುಗಳೇನು ;

(ಆ) ಈ ನಿಟ್ಟಿನಲ್ಲಿ ನಡೆದಿರುವ ಪ್ರಕ್ರಿಯೆಗಳೇನು ; (ವಿವರ ಒದಗಿಸುವುದು)

(ಇ) ಸಂಭಾವ್ಯ ಸ್ಥಳಗಳನ್ನು ಸರ್ಕಾರ ಪರಿಶೀಲಿಸುತ್ತಿದೆಯೇ ; ಹಾಗಿದ್ದಲ್ಲಿ, ಅವುಗಳು ಯಾವುವು ? (ಸಂಪೂರ್ಣ ಮಾಹಿತಿ ಒದಗಿಸುವುದು)

## ವಕ್ಫ್ ಬೋರ್ಡ್ ನಿವೇಶನಗಳ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) :-**

೬೬೮ (೭೯೭) ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರ ಮತ್ತು ಹೊರವಲಯದಲ್ಲಿ ವಕ್ಫ್ ಮಂಡಳಿಯಿಂದ ಎಷ್ಟು ನಿವೇಶನಗಳು ಹಂಚಿಕೆಯಾಗಿವೆ ಮತ್ತು ಇವು ಎಷ್ಟು ಸುರಕ್ಷಿತವಾಗಿವೆ ;

(ಆ) ಒಂದೇ ನಿವೇಶನ ಹಲವರ ಹೆಸರುಗಳಲ್ಲಿ ರಿಜಿಸ್ಟ್ರೇಷನ್ ಆಗಿ ನಿವೇಶನದ ಮಾಲೀಕರಿಗೆ ಗೊಂದಲ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ವಕ್ಸ್ ಬೋರ್ಡ್ ವತಿಯಿಂದ ಹಂಚಿಕೆಯಾದ/ ಹಂಚಿಕೆಯಾಗುವ ನಿವೇಶನಗಳಿಗೆ ಇರುವ ಮಾನದಂಡಗಳೇನು ; ಹಾಗೂ ಸದರಿ ನಿವೇಶನಗಳನ್ನು ಪಡೆಯಲು ಯಾರು ಅರ್ಹರಾಗಿರುತ್ತಾರೆ ; (ಫಲಾನುಭವಿಗಳ ಪಟ್ಟಿ ನೀಡುವುದು)

(ಈ) ಭವಿಷ್ಯದಲ್ಲಿ ಸದರಿ ನಿವೇಶನಗಳನ್ನು ಉಳಿಸಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು ಮತ್ತು ಸಂಬಂಧಪಟ್ಟ ಫಲಾನುಭವಿಗಳಿಗೆ ಯಾವ ರೀತಿ ನಿವೇಶನ ಭದ್ರತೆಯನ್ನು ಒದಗಿಸಲಾಗಿದೆ ?

## ಮಾನ್ಯ ಮುಖ್ಯಮಂತ್ರಿ ಅಮೃತ ನಗರೋತ್ಥಾನ ಯೋಜನೆ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) :-**

೬೭೯ (೭೯೮) ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯು ಪ್ರಾರಂಭವಾದ ವರ್ಷ ಯಾವುದು ಮತ್ತು ಯಾವ ಹಂತದಲ್ಲಿದೆ ;

(ಆ) ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯಡಿ ಪ್ರಾರಂಭವಾಗದ ಕಾಮಗಾರಿಗಳ ಬದಲಾಗಿ ಪರಿಷ್ಕೃತ ಕ್ರಿಯಾಯೋಜನೆ ಅನುಮೋದನೆ ಪಡೆಯಲು ಶಿಫಾರಸ್ಸು ಮಾಡುವಾಗ ತೆಗೆದುಕೊಂಡ ಮಾನದಂಡಗಳೇನು ; ಸದರಿ ಯೋಜನೆಯಲ್ಲಿ ಪಾರದರ್ಶಕತೆ ಕಾಯ್ದೆಯನ್ನು ಪಾಲಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಸಣ್ಣ ಕಾಮಗಾರಿಗಳನ್ನು ಪ್ಯಾಕೇಜ್ ಮಾಡಿ ಟೆಂಡರ್ ಹಂಚಿಕೆ ಮಾಡುವುದರಲ್ಲಿನ ಮಾನದಂಡಗಳೇನು ; ಸದರಿ ಮಾನದಂಡಗಳನ್ನು ಪಾಲಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ನಡೆಯದ ಕಾಮಗಾರಿಗಳ ಪರಿಷ್ಕೃತ ಕ್ರಿಯಾಯೋಜನೆ ರೂಪಿಸುವಾಗ ಉದ್ದೇಶಪೂರ್ವಕವಾಗಿ ತಪ್ಪೆಸಗಿದ್ದು, ಇದರಲ್ಲಿ ಭಾಗಿಯಾದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗಿದೆಯೇ ;

(ಉ) ಹಾಗಿದ್ದಲ್ಲಿ, ತಪ್ಪಿತಸ್ಥರ ವಿರುದ್ಧ ಯಾವ ಕ್ರಮ ಜರುಗಿಸಲಾಗಿದೆ ಹಾಗೂ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಗಳ ಸಮರ್ಪಕ ಜಾರಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ? (ಸಮಗ್ರ ಮಾಹಿತಿ ನೀಡುವುದು)

## ಕೆ.ಐ.ಎ.ಡಿ. ಬಿ ಯಲ್ಲಿ ಪರಿಹಾರ ನೀಡಿಕೆಯಲ್ಲಿ ಆದ ಅವ್ಯವಹಾರಗಳ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) :-**

೬೭೦ (೮೩೩) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಐದು ವರ್ಷಗಳಲ್ಲಿ ಕೆ.ಐ.ಎ.ಡಿ.ಬಿ ವತಿಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ದಾಬಸ್ ಪೇಟೆಯ ಸುತ್ತಮುತ್ತ ಕೈಗಾರಿಕೆ ಮತ್ತು ಇತರ ಅಭಿವೃದ್ಧಿ ಕಾಮಗಾರಿಗಳ ಸಲುವಾಗಿ ಎಷ್ಟು ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ ; (ವರ್ಷವಾರು, ಗ್ರಾಮವಾರು ಸರ್ವೆ ನಂ.ವಾರು ಸಂಪೂರ್ಣ ವಿವರ ನೀಡುವುದು)

(ಆ) ಸದರಿ ಭೂಮಿಗೆ ಮಾರುಕಟ್ಟೆಯ ಮೌಲ್ಯದ ಎಷ್ಟು ಪಟ್ಟು ಹಣವನ್ನು ಪರಿಹಾರವಾಗಿ ನೀಡಲಾಯಿತು ;

(ಇ) ವಶಪಡಿಸಿಕೊಂಡ ಭೂಮಿಯಲ್ಲಿ ಬೆಳೆದ ಮರಗಳಿಗೆ ನೀಡಿದ ಪರಿಹಾರದ ಮೊತ್ತವೆಷ್ಟು ;

(ಈ) ಭೂಸ್ವಾಧೀನ ಮಾಡಿಕೊಂಡ ಭೂಮಿಯಲ್ಲಿ ಹಿಂದಿನ ಐದು ವರ್ಷಗಳಲ್ಲಿ ಆರ್.ಟಿ.ಸಿ ದಾಖಲಾದ ಬೆಳೆಗಳ ಗ್ರಾಮ ವರ್ಷವಾರು ಸರ್ವೆ ನಂ. ವಾರು ವಿವರ ನೀಡುವುದು ; ಮರ/ಗಿಡಗಳಿಗೆ ಪರಿಹಾರಕ್ಕೆ ಶಿಫಾರಸ್ಸು ಮಾಡಿದ ಅಧಿಕಾರಿಗಳ ಹೆಸರು ಹುದ್ದೆಯ ವಿವರ ನೀಡುವುದು ;

(ಉ) ಮರ, ಗಿಡಗಳಿಗೆ ನೀಡಿದ ಪರಿಹಾರದ ಮೊತ್ತವೆಷ್ಟು ; (ಗ್ರಾಮವಾರು ಸರ್ವೆ ನಂ ವಾರು ವಿವರ ನೀಡುವುದು)

(ಊ) ಭೂಸ್ವಾಧೀನ ಮಾಡಿಕೊಂಡ ನಂತರ ದಲ್ಲಾಳಿಗಳು, ಅಧಿಕಾರಿಗಳು ರಾತ್ರೋರಾತ್ರಿ ಸಾವಿರಾರು ಸಸಿಗಳನ್ನು ನೆಟ್ಟು ಕೋಟ್ಯಾಂತರ ರೂ ಪರಿಹಾರ ಪಡೆದು ವಂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ?

## ಹಾರೋಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ನಕಲಿ ಖಾತೆ ರದ್ದು ಮಾಡುವ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) :-**

೬೭೧ (ಲಸಿಳ) ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕಿನ ಹಾರೋಹಳ್ಳಿ ಪಟ್ಟಣ ಪಂಚಾಯಿತಿ ಕಾರ್ಯಾಲಯದಲ್ಲಿ ಸರ್ವೆ ನಂ ೭೪ರಲ್ಲಿ ದಾಖಲಾಗಿರುವ ನಕಲಿ ಖಾತೆಗಳ ಸಂಖ್ಯೆ ಎಷ್ಟು ;

(ಆ) ನಕಲಿ ಖಾತೆ ಮೂಲಕ ಭೂ ಕಬಳಿಕೆ ಮಾಡಿರುವ ಆಸ್ತಿಗಳ ಒಟ್ಟು ಮಾರುಕಟ್ಟೆ ಮೌಲ್ಯವೆಷ್ಟು ;

(ಇ) ಸರ್ವೆ ನಂ. ೭೪ರಲ್ಲಿ ದಾಖಲಾಗಿರುವ ನಕಲಿ ಖಾತಾ ರದ್ದು ಮಾಡಲು ಪಟ್ಟಣ ಪಂಚಾಯಿತಿಯಿಂದ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ ; ಸಲ್ಲಿಸಲಾಗಿದ್ದಲ್ಲಿ, ಅದರ ಪ್ರತಿಯನ್ನು ನೀಡುವುದು ;

(ಈ) ನಕಲಿ ಖಾತಾ ರದ್ದು ಮಾಡಲು ಅನುಸರಿಸುವ ಪ್ರಕ್ರಿಯೆ ಏನು ; ನಕಲಿ ಖಾತೆ ರದ್ದು ಮಾಡಲು ತೆಗೆದುಕೊಳ್ಳುವ ಕಾಲಾವಧಿಯೆಷ್ಟು ;

(ಉ) ಸರ್ವೆ ನಂ.೭೪ರಲ್ಲಿನ ನಕಲಿ ಖಾತೆ ರದ್ದು ಮಾಡಲು ಅನಗತ್ಯ ವಿಳಂಬವಾಗುತ್ತಿರಲು ಕಾರಣಗಳೇನು ?

## ಯಶಸ್ವಿನಿ ಯೋಜನೆ ಬಗ್ಗೆ

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೬೭೨ (೮೪೩) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಯಶಸ್ವಿನಿ ಯೋಜನೆಯ ರೂಪು-ರೇಷೆಗಳೇನು ; (ವಿವರ ನೀಡುವುದು)

(ಆ) ಸದರಿ ಯೋಜನೆಯಡಿ ಯಾವ ಯಾವ ಖಾಯಿಲೆಗೆ ಚಿಕಿತ್ಸೆ/ ಶಸ್ತ್ರ ಚಿಕಿತ್ಸೆ ನಡೆಸಲಾಗುವುದು ;

(ಇ) ಸದರಿ ಯೋಜನೆಯಲ್ಲಿ ನೋಂದಾಯಿತ ಫಲಾನುಭವಿಗಳ ಸಂಖ್ಯೆ ಹಾಗೂ ಇದುವರೆಗೆ ಚಿಕಿತ್ಸೆ ಪಡೆದವರ ಸಂಖ್ಯೆ ಎಷ್ಟು ;

(ಈ) ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಕೆಲವು ನ್ಯೂನ್ಯತೆಗಳಿಂದ ರೋಗಿಗಳಿಗೆ ಸಮರ್ಪಕ ಶಸ್ತ್ರ ಚಿಕಿತ್ಸೆ ದೊರೆಯದಿರವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಖಾಸಗಿ ಆಸ್ಪತ್ರೆಗಳು ಈ ಯೋಜನೆಗೆ ಸೂಕ್ತ ಸಹಕಾರ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಆಯುಷ್ಮಾನ್ ಭಾರತ್ ಹಾಗೂ ಯಶಸ್ವಿನಿ ಯೋಜನೆಗಳಿಗೆ ಇರುವ ವ್ಯತ್ಯಾಸಗಳೇನು ? (ವಿವರ ನೀಡುವುದು)

## ಸರ್ಕಾರದಿಂದ ಬಿಡುಗಡೆಯಾದ ಅನುದಾನ, ಖರ್ಚಾದ ಅನುದಾನ/ಸಾರ್ವಜನಿಕರಿಂದ ಕ್ರೋಢೀಕರಣವಾದ ಮೊತ್ತದ ಬಗ್ಗೆ

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೬೭೩ (೮೪೨) ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಜಿಲ್ಲೆಯಲ್ಲಿ ಪೌರಾಡಳಿತ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನಗರಸಭೆಗಳು, ಪುರಸಭೆಗಳು, ಪಟ್ಟಣ

ಪಂಚಾಯಿತಿಗಳ ಸಂಖ್ಯೆ ಎಷ್ಟು ; (ಸಂಸ್ಥೆಗಳವಾರು ವಿವರ ನೀಡುವುದು)

(ಆ) ಕಳೆದ ೨ ವರ್ಷಗಳಲ್ಲಿ ಈ ಸಂಸ್ಥೆಗಳಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಪ್ರಮಾಣ ಎಷ್ಟು ; ಖರ್ಚಾದ ಅನುದಾನ ಎಷ್ಟು ; ಸಾರ್ವಜನಿಕರಿಂದ ಕ್ರೋಢೀಕರಣಗೊಂಡ ಮೊತ್ತವೆಷ್ಟು ; (ವಿವರ ನೀಡುವುದು)

(ಇ) ಈ ಇಲಾಖೆಯಲ್ಲಿ ಮಂಜೂರಾದ ಒಟ್ಟು ನೌಕರರ ಸಂಖ್ಯೆ ಎಷ್ಟು ; ಅದರಲ್ಲಿ ಖಾಲಿ ಮತ್ತು ಭರ್ತಿ ಇರುವ ನೌಕರರ ಸಂಖ್ಯೆಯ ಅಂಕಿ ಅಂಶಗಳ ವಿವರವನ್ನು ವೃಂದವಾರು ನೀಡುವುದು ?

## ಅಡಿಕೆ ಬೆಳೆಗಾರರ ಸಮಸ್ಯೆಗಳ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :-**

೬೭೪ (೮೧೩) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಅಡಿಕೆ ಬೆಳೆಯನ್ನು ಬೆಳೆಸಲಾಗುತ್ತಿದೆ ; ಅಡಿಕೆ ಬೆಳಗೆ ರೋಗ ಬಂದಾಗ ಬೆಳೆಗಾರರಿಗೆ ಸಹಾಯ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಆ) ಅಡಿಕೆ ಬೆಳೆ ಸಹಾಯ ಮಾಡಲು ಮತ್ತು ಬೆಲೆಯನ್ನು ನಿಯಂತ್ರಣದಲ್ಲಿರಿಸಲು ಅಡಿಕೆ ಬೆಳೆಗಾರರ ನಿಗಮ ಮಾಡಬೇಕೆಂಬ ಬೇಡಿಕೆಯನ್ನು ಇಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ;

(ಇ) ಅಡಿಕೆ ಬೆಳೆಗಾರರಿಗೆ ಬೆಲೆ ಕುಸಿತಗೊಂಡಾಗ ಅಡಿಕೆಯನ್ನು ಖರೀದಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ ; (ವಿವರ ನೀಡುವುದು)

(ಈ) ಅಡಿಕೆ ಬೆಳೆಗಾರರಿಗೆ ಸಹಾಯ ಮಾಡಲು ಆವರ್ತ ನಿಧಿಯೊಂದನ್ನು ಸ್ಥಾಪಿಸಲಾಗಿದೆಯೇ ?

## ತೋಟಗಾರಿಕೆ ಇಲಾಖೆಯಲ್ಲಿ ಸುವರ್ಣ ಕರ್ನಾಟಕ ಉತ್ಪನ್ನಗಳ ಪ್ರತಿಷ್ಠಾನದ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :-**

೬೭೫ (೮೧೪) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತೋಟಗಾರಿಕೆ ಇಲಾಖೆಯಲ್ಲಿ ಸುವರ್ಣ ಕರ್ನಾಟಕ ಉದ್ಯಾನಗಳ ಪ್ರತಿಷ್ಠಾನ (SKUP) ಪ್ರಾರಂಭಗೊಂಡಿದ್ದು, ಯಾವಾಗ ; ಯಾವ ನಿಯಮದಡಿ ನೋಂದಣಿಯಾಗಿರುತ್ತದೆ ಹಾಗೂ ಇದರ ಮುಖ್ಯ ಉದ್ದೇಶಗಳೇನು ;

(ಆ) ವಾರ್ಷಿಕ ಅನುದಾನ ಎಷ್ಟು ಹಾಗೂ (SKUP) ಅನುದಾನದ ಆಡಿಟ್ ಆಗಿದೆಯೇ ; ಆಗಿದ್ದಲ್ಲಿ, ವಿವರಗಳನ್ನು ನೀಡುವುದು ;

(ಇ) ತೋಟಗಾರಿಕೆ ಇಲಾಖೆಯಲ್ಲಿ ಹುದ್ದೆಗಳನ್ನು ಉನ್ನತೀಕರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಇದ್ದಲ್ಲಿ, ಯಾವ ಯಾವ ಹುದ್ದೆಗಳನ್ನು ಉನ್ನತೀಕರಿಸಲಾಗಿದೆ ; (ವಿವರ ನೀಡುವುದು)

(ಈ) ಉನ್ನತೀಕರಿಸುವುದರಿಂದ ಇಲಾಖೆಗೆ ಹಾಗೂ ರೈತರಿಗೆ ಆಗುವ ಅನುಕೂಲಗಳೇನು ; ಸದರಿ ಪ್ರಸ್ತಾವನೆಗೆ ಸರ್ಕಾರಕ್ಕೆ ತಗಲುವ ಆರ್ಥಿಕ ವೆಚ್ಚ ಎಷ್ಟು ?

## ಮಂಗಳೂರಿನಲ್ಲಿ ಎಂ.ಆರ್.ಪಿ.ಎಲ್/ಓಎನ್‌ಜಿಸಿ ಕೈಗಾರಿಕೆ ಭೂಸ್ವಾಧೀನ ಮಾಡಿರುವ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :-**

೬೭೬ (೮೧೫) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಗಳೂರಿನಲ್ಲಿ ಎಂ.ಆರ್.ಪಿ.ಎಲ್/ಓಎನ್‌ಜಿಸಿ ೪ ನೇ ಹಂತದಲ್ಲಿ ಎಷ್ಟು ಎಕರೆ ಭೂಮಿಯನ್ನು ಯಾವಾಗ ರೈತರಿಂದ ಪಡೆದುಕೊಳ್ಳಲಾಗಿದೆ ಈ ಎಲ್ಲಾ ಮಂದಿ ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆಗೆ ಅರ್ಹರೆ ; (ವಿವರ ನೀಡುವುದು)

(ಆ) ಭೂಮಿ ನೀಡಿದ ನಿರ್ವಸಿತರಿಗೆ ಉದ್ಯೋಗ ನೀಡಲು ಎಂ.ಆರ್.ಪಿ.ಎಲ್/ಓಎನ್‌ಜಿಸಿ ಮತ್ತು ಸರ್ಕಾರದ ನಿಲುವೇನು ; (ವಿವರ ನೀಡುವುದು)

(ಇ) ಓಎನ್.ಜಿಸಿ/ಎಂ.ಆರ್.ಪಿ.ಎಲ್ ಕೈಗಾರಿಕೆ ಭೂಸ್ವಾಧೀನ ಮಾಡಿದ ಜಾಗದ ಬದಿಯ ಹತ್ತಿರದಲ್ಲಿಯೇ ಪುನರ್ ವಸತಿಯನ್ನು ಕಲ್ಪಿಸಬೇಕೆಂಬ ನಿಯಮವಿದ್ದರೂ ನೀಡಿರುವುದಿಲ್ಲವೆಂಬ ದೂರುಗಳಿರುವುದು ನಿಜವೇ ; ಕಲ್ಪಿಸಿದ್ದಲ್ಲಿ, ವಿವರ ನೀಡುವುದು ;

(ಈ) ಭೂಸ್ವಾಧೀನ ಮಾಡಿದ ಜಮೀನಿನಲ್ಲಿ ಇದ್ದ ಕೃಷಿ ಭೂಮಿ, ಮರಗಳು ಹಾಗೂ ಮನೆಗಳಿಗೆ ಪರಿಹಾರಗಳನ್ನು ಯಾವ ಮಾನದಂಡದಲ್ಲಿ ನೀಡಲಾಗುತ್ತಿದೆ ? (ವಿವರ ನೀಡುವುದು)

## ಮಹಾನಗರ ಪಾಲಿಕೆ ಸದಸ್ಯರುಗಳ ಗೌರವಧನದ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :-**

೬೭೭ (೮೧೬) ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಹಾನಗರ ಪಾಲಿಕೆ ಸದಸ್ಯರುಗಳ ಗೌರವಧನವನ್ನು ಹೆಚ್ಚಿಸಬೇಕೆಂಬ ಬೇಡಿಕೆ ಇದ್ದು, ಇದನ್ನು ಹೆಚ್ಚಿಸಲು ಕ್ರಮಕೈಗೊಳ್ಳಲಾಗಿದೆಯೇ ; ಪ್ರಸ್ತುತ ನೀಡುವ ಗೌರವಧನ ಎಷ್ಟು ; (ವಿವರ ನೀಡುವುದು)

(ಆ) ಮಹಾನಗರ ಪಾಲಿಕೆ ಸದಸ್ಯರುಗಳಿಗೆ ಆರೋಗ್ಯದ ವಿಮೆ ನೀಡಲು ಕ್ರಮಕೈಗೊಳ್ಳಲಾಗಿದೆಯೇ ;

(ಇ) ಅನೇಕ ನಗರ/ಪಾಲಿಕೆ ಸದಸ್ಯರು ತಮ್ಮ ನಿವೃತ್ತಿಯ ನಂತರ ಅನಾರೋಗ್ಯಕ್ಕೆ ಬಲಿಯಾಗುತ್ತಿದ್ದು ಅವರು ಪಿಂಚಣಿಯಿಲ್ಲದೆ ಆರ್ಥಿಕವಾಗಿ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಆರೋಗ್ಯ ವಿಮೆ ನೀಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಈ) ಮಂಗಳೂರು ಮಹಾನಗರ ಪಾಲಿಕೆ ೨೦೨೨-೨೩, ೨೦೨೩-೨೪ ರಲ್ಲಿ ಬಿಡುಗಡೆ ಮಾಡಿದ ವಿಶೇಷ ಅನುದಾನ ಎಷ್ಟು ? (ವಿವರ ನೀಡುವುದು)

## ಮಂಗಳೂರು ಸ್ಮಾರ್ಟ್ ಸಿಟಿ ಯೋಜನೆಯ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :-**

೬೭೮ (೮೧೭) ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಗಳೂರು ಸ್ಮಾರ್ಟ್ ಸಿಟಿ ಯೋಜನೆಯ ಅಡಿಯಲ್ಲಿ ೨೦೨೧-೨೨, ೨೦೨೨-೨೩, ಮತ್ತು ೨೦೨೩-೨೪ರಲ್ಲಿ ಕೈಗೊಂಡ ಯೋಜನೆಗಳಾವುವು ;

(ಆ) ಮಂಗಳೂರಿನಲ್ಲಿ ಕೈಗೊಂಡ ಸ್ಮಾರ್ಟ್ ಸಿಟಿ ಯೋಜನೆಗಳಲ್ಲಿ ಕೈಗೊಂಡ ಕಾಮಗಾರಿಗಳು ಕಳಪೆಮಟ್ಟದ್ದಾಗಿದ್ದು, ಇತ್ತೀಚೆಗೆ ಕುಸಿದು ಬಿದ್ದಿರುವ ತಡೆಗೋಡೆಗಳಿಂದ ಉಂಟಾದ ನಷ್ಟವೆಷ್ಟು ; ಈ ಬಗ್ಗೆ ತನಿಖೆ ನಡೆಸಲಾಗಿದೆಯೇ ; (ವಿವರ ನೀಡುವುದು)

(ಇ) ನಗರಪಾಲಿಕೆ ವ್ಯಾಪ್ತಿಯಲ್ಲಿ ಕೈಗೊಂಡ ಹಂಪನಕಟ್ಟೆ ಪಾರ್ಕಿಂಗ್ ಕಾಂಪ್ಲೆಕ್ಸ್ ಕಾಮಗಾರಿ ಕುಂಠಿತಗೊಳ್ಳಲು ಕಾರಣವೇನು ; ಯಾವ ಕಾಲಮಿತಿಯೊಳಗೆ ಪೂರ್ಣಗೊಳ್ಳುವುದು ; (ವಿವರ ನೀಡುವುದು)

(ಈ) ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪಂಪ್‌ವೆಲ್ ಬಳಿ ಪ್ರಾರಂಭಗೊಳ್ಳಲು ಉದ್ದೇಶಿಸಿರುವ "ಬಸ್ಸು ನಿಲ್ದಾಣದ" ಕಾಮಗಾರಿ ಪ್ರಾರಂಭವಾಗದಿರಲು ಕಾರಣವೇನು ? (ವಿವರ ನೀಡುವುದು)

## ನೇಕಾರರು ಉತ್ಪಾದಿಸಿದ ಜವಳಿ ವಸ್ತುಗಳ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೬೭೯ (೮೦೧) ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ನೇಕಾರರು ಉತ್ಪಾದಿಸಿದ ಜವಳಿ ವಸ್ತುಗಳಾದ ಸೀರೆ, ಟವಲ್, ಜಮಖಾನೆ ಸೇರಿದಂತೆ ಇತರೆ ಜವಳಿ ವಸ್ತುಗಳ ಮಾರುಕಟ್ಟೆ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಜವಳಿ ಮಾರುಕಟ್ಟೆ ಸುಧಾರಣೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ; (ಮಾಹಿತಿ ಒದಗಿಸುವುದು)

(ಆ) ಜವಳಿ ಉತ್ಪಾದನೆ ರಫ್ತು ಹಾಗೂ ರಾಜ್ಯದ ನೇಕಾರಿಕೆ ವಲಯದಲ್ಲಿ ಉದ್ಯೋಗ ಸೃಷ್ಟಿಗೆ ಸರ್ಕಾರ ಯೋಜನೆ ರೂಪಿಸಿದೆಯೇ ; (ವಿವರ ನೀಡುವುದು)

(ಇ) ಕರೋನ ಲಾಕ್‌ಡೌನ್ ಹಾಗೂ ಅದರ ನಂತರದ ಅವಧಿಯಲ್ಲಿ ರಾಜ್ಯದಲ್ಲಿ ಆತ್ಮಹತ್ಯೆ ಮಾಡಿಕೊಂಡ ನೇಕಾರರ ನಿಖರ ಸಂಖ್ಯೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ನೇಕಾರರ ಆತ್ಮಹತ್ಯೆ ತಡೆಗಟ್ಟುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ?

## ಹಾಲಿನ ಪ್ರೋತ್ಸಾಹಧನ ಬಿಡುಗಡೆ ಮಾಡುವ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :-**

೬೮೦ (೭೭೪) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಪ್ರತಿದಿನ ಉತ್ಪಾದನೆಯಾಗುತ್ತಿರುವ ಹಾಲಿನ ಪ್ರಮಾಣ ಎಷ್ಟು ; (ಒಕ್ಕೂಟವಾರು ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿರುವ ಹಾಲಿನ ಡೈರಿಗಳ ಮತ್ತು ಹಾಲು ಉತ್ಪಾದಕರ ಸಂಖ್ಯೆ ಎಷ್ಟು ಹಾಗೂ ಹಾಲು ಉತ್ಪಾದಕರು ಪೂರೈಕೆ ಮಾಡುತ್ತಿರುವ ಪ್ರತಿ ಲೀಟರ್ ಹಾಲಿಗೆ ಪಾವತಿಸುತ್ತಿರುವ ದರವೆಷ್ಟು ; (ಒಕ್ಕೂಟವಾರು ಮಾಹಿತಿ ನೀಡುವುದು)

(ಇ) ಕಳೆದ ೧೫ ತಿಂಗಳ ಅವಧಿಯಲ್ಲಿ ಹಾಲು ಉತ್ಪಾದಕರಿಗೆ (ಸಾಮಾನ್ಯ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ) ಪಾವತಿ ಮಾಡಿದ ಹಾಗೂ ಪಾವತಿಸಲು ಬಾಕಿಯಿರುವ ಪ್ರೋತ್ಸಾಹಧನದ ಒಟ್ಟು ಮೊತ್ತವೆಷ್ಟು ; (ಒಕ್ಕೂಟವಾರು ಮಾಹಿತಿ ನೀಡುವುದು)

(ಈ) ಪ್ರೋತ್ಸಾಹಧನ ಪಾವತಿಸಲು ಬಾಕಿ ಉಳಿಸಿಕೊಂಡಿರುವುದಕ್ಕೆ ಕಾರಣಗಳೇನು ; (ಯಾವ ಕಾಲಮಿತಿಯೊಳಗೆ ಪ್ರೋತ್ಸಾಹಧನ ಪಾವತಿಸಲಾಗುವುದು)

(ಉ) ಪ್ರೋತ್ಸಾಹಧನದ ಮೊತ್ತವನ್ನು ಹೆಚ್ಚಿಸುವ ಕುರಿತು ಸರ್ಕಾರದ ನಿಲುವೇನು ;

(ಊ) ರೈತ ಮಹಿಳೆಯಲ್ಲಿ ಹೈನುಗಾರಿಕೆಯನ್ನು ಪ್ರೋತ್ಸಾಹಿಸಲು ಸರ್ಕಾರ ಯಾವ ರೀತಿಯ ನೆರವು ನೀಡಲಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ಮಂಡ್ಯ ನಗರಕ್ಕೆ ವರ್ತುಲ ರಸ್ತೆ ನಿರ್ಮಿಸುವ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :-**

೬೮೧ (೭೭೫) ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಡ್ಯ ನಗರದ ದಕ್ಷಿಣ ಭಾಗದಲ್ಲಿ ಬೈಪಾಸ್ ರಸ್ತೆ (ವರ್ತುಲ ರಸ್ತೆ) ನಿರ್ಮಾಣ ಮಾಡಲು ಉದ್ದೇಶಿಸಿದ ಯೋಜನೆಯು ಪ್ರಸ್ತುತ ಯಾವ ಹಂತದಲ್ಲಿದೆ ; ಯೋಜನಾ ನೀಲಿನಕ್ಷೆಯೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು ;

(ಆ) ಉದ್ದೇಶಿತ ವರ್ತುಲ ರಸ್ತೆಯ ಉದ್ದ ಮತ್ತು ಯೋಜನಾ ವೆಚ್ಚವೆಷ್ಟು; ಎಷ್ಟು ಸರ್ವೆ ನಂಬರ್‌ಗಳ ಎಷ್ಟು ಎಕರೆ ಭೂಮಿಯನ್ನು ಭೂಸ್ವಾಧೀನಕ್ಕೆ ಒಳಪಡಿಸಿಕೊಳ್ಳಲು ನಿರ್ಧರಿಸಲಾಗಿದೆ ; (ಸರ್ವೆ ನಂಬರ್‌ಗಳ ಸಮೇತ ವಿವರ ನೀಡುವುದು)

(ಇ) ವರ್ತುಲ ರಸ್ತೆ ನಿರ್ಮಾಣಕ್ಕೆ ಈಗಾಗಲೇ ಜಮೀನು ಸ್ವಾಧೀನಪಡಿಸಿಕೊಳ್ಳಲಾಗಿದೆಯೇ ; ಮಂಡ್ಯ ನಗರ ವ್ಯಾಪ್ತಿ ವಿಸ್ತಾರವಾಗುತ್ತಿರುವುದರಿಂದ ಬೈಪಾಸ್ ರಸ್ತೆ ಯೋಜನೆ ಅನುಷ್ಠಾನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಉದ್ದೇಶಿತ ಬೈಪಾಸ್ ರಸ್ತೆಗೆ ಗುರುತಿಸಿರುವ ಜಮೀನುಗಳ ಭೂ ಪರಿವರ್ತನೆ ಮತ್ತು ಮನೆ ನಿರ್ಮಾಣಕ್ಕೆ ಅನುಮತಿ ಪತ್ರ ನೀಡದಿರುವುದಕ್ಕೆ ಕಾರಣಗಳೇನು ; (ವಿವರ ನೀಡುವುದು)

(ಉ) ಈ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು ? (ವಿವರ ನೀಡುವುದು)

## ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆಯಾಗಿರುವ ಸಿ.ಎ. ನಿವೇಶನಗಳ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :-**

೬೮೨ (೭೭೬) ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಿಂದ ವಿವೇಕಾನಂದ ನಗರ ಬಡಾವಣೆಯಲ್ಲಿ ಕಟ್ಟಡ ನಿರ್ಮಾಣ ಮಾಡಲು ಸಿ.ಎ. ನಿವೇಶನಗಳನ್ನು ಎಷ್ಟು ಸರ್ಕಾರಿ ಕಛೇರಿ/ಸಂಸ್ಥೆಗಳಿಗೆ ಯಾವಾಗ ಹಂಚಿಕೆ ಮಾಡಲಾಗಿದೆ ;

(ಆ) ಈ ಪೈಕಿ ಕಟ್ಟಡ ನಿರ್ಮಾಣ ಮಾಡಿಕೊಂಡ ಮತ್ತು ಕಟ್ಟಡ ನಿರ್ಮಿಸಿಕೊಳ್ಳದ ಸಂಸ್ಥೆಗಳು ಯಾವುವು ; (ಸಂಸ್ಥೆ, ಸಿ.ಎ. ನಿವೇಶನ

ಸಂಖ್ಯೆ, ವಿಸ್ತೀರ್ಣ, ಹಂಚಿಕೆಯಾಗಿರುವ ದಿನಾಂಕ, ಪಾವತಿಸಿರುವ ಮೊತ್ತ ಹಾಗೂ ಸ್ವಾಧೀನ ಪಡೆದಿರುವ ದಿನಾಂಕಗಳ ಬಗೆಗಿನ ಸಂಪೂರ್ಣ ಮಾಹಿತಿ ನೀಡುವುದು)

(ಇ) ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಿಂದ 'ಬೇಡಿಕೆ ಸಮೀಕ್ಷೆ' ನಡೆಸಲಾಗಿದೆಯೇ ಮತ್ತು ಯಾವಾಗ ನಡೆಸಲಾಗಿದೆ ; ಪ್ರತಿಯೊಬ್ಬ ನಿವೇಶನ ಆಕಾಂಕ್ಷಿಗಳಿಂದ ಸಂಗ್ರಹಿಸಿದ ಶುಲ್ಕವೆಷ್ಟು ; ಎಷ್ಟು ಮಂದಿ ಶುಲ್ಕ ಪಾವತಿಸಿದ್ದಾರೆ ; (ಸಂಗ್ರಹವಾದ ಒಟ್ಟು ಮೊತ್ತವೆಷ್ಟು)

(ಈ) ಸ್ವೀಕೃತವಾದ ಅರ್ಜಿಗಳ ಪೈಕಿ ಎಷ್ಟು ಮಂದಿ ನಿವೇಶನ ಆಕಾಂಕ್ಷಿಗಳಿಗೆ ನಿವೇಶನಗಳನ್ನು ಈವರೆವಿಗೂ ಮಂಜೂರು ಮಾಡಲಾಗಿದೆ ; ಸಂಗ್ರಹವಾದ ಹಣ ಏನಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಉ) ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಯಾವುದಾದರೂ ಪ್ರಕರಣಗಳು ನ್ಯಾಯಾಲಯದಲ್ಲಿವೆಯೇ ; ಹಾಗಿದ್ದಲ್ಲಿ, ಈ ಪ್ರಕರಣಗಳು ಪ್ರಸ್ತುತ ಯಾವ ಹಂತದಲ್ಲಿವೆ ?

## ದಿ ಮೈಸೂರು ಷುಗರ್ ಕಂಪನಿ ಲಿಮಿಟೆಡ್, ಮಂಡ್ಯ ಕಾರ್ಖಾನೆಯ ಲಾಭ–ನಷ್ಟದ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೬೮೩ (೭೭೭) ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ನಗರದಲ್ಲಿರುವ ಕರ್ನಾಟಕ ಸರ್ಕಾರದ ಉದ್ದಿಮೆಯಾದ ದಿ ಮೈಸೂರು ಷುಗರ್ ಕಂಪನಿ ಲಿಮಿಟೆಡ್‌ಗೆ ಸೇರಿದ ಚರಾಸ್ತಿ ಮತ್ತು ಸ್ಥಿರಾಸ್ತಿಗಳು ಯಾವುವು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಕಂಪನಿ ಲಾಭದಿಂದ ನಷ್ಟಕ್ಕೆ ಹೊರಳಿದ ನಂತರದಿಂದ ಈವರೆವಿಗೂ ಎಷ್ಟು ಕೋಟಿ ರೂಪಾಯಿ ನಷ್ಟದಲ್ಲಿದೆ ;

(ವರ್ಷವಾರು, ನಷ್ಟದ ಮೊತ್ತದೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

(ಇ) ಈ ಕಂಪನಿ ಲಾಭದಿಂದ ನಷ್ಟಕ್ಕೆ ಹೊರಳಿದ ನಂತರ ಅಧ್ಯಕ್ಷರಾಗಿ ಹಾಗೂ ವ್ಯವಸ್ಥಾಪಕ ನಿರ್ದೇಶಕರಾಗಿ ಯಾರ್ಯಾರು ನೇಮಕೊಂಡರು ಹಾಗೂ ಇವರ ಅವಧಿಯಲ್ಲಿ ಕಾರ್ಖಾನೆಗಳಿಸಿದ ಲಾಭ ಅಥವಾ ನಷ್ಟದ ಮೊತ್ತವೆಷ್ಟು ;

(ಈ) ಇವರ ಅವಧಿಯಲ್ಲಿ ಕಾರ್ಖಾನೆಯ ದುರಸ್ತಿ, ಪುನಃಶ್ಚೇತನ/ ನವೀಕರಣ ಕಾಮಗಾರಿಗಳಿಗೆ ಆಗಿರುವ ವೆಚ್ಚವೆಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಉ) ಕಾರ್ಖಾನೆಯ ಪುನಃಶ್ಚೇತನಕ್ಕಾಗಿ ಸರ್ಕಾರದಿಂದ ಇದುವರೆವಿಗೂ ಬಿಡುಗಡೆ ಮಾಡಿರುವ ಅನುದಾನವೆಷ್ಟು ; (ವರ್ಷವಾರು ಮಾಹಿತಿ ನೀಡುವುದು)

(ಊ) ಹಣಕಾಸು ದುರುಪಯೋಗ ಪ್ರಕರಣಗಳಿದ್ದಲ್ಲಿ, ಪ್ರಕರಣದ ಪ್ರಸ್ತುತ ಹಂತದ ಮಾಹಿತಿ ನೀಡುವುದು ?

## ಮಂಡ್ಯ ತೋಟಗಾರಿಕೆ ಇಲಾಖೆಗೆ ಸೇರಿದ ಜಾಗವನ್ನು ನ್ಯಾಯಾಂಗ ಇಲಾಖೆಗೆ ಮಂಜೂರು ಮಾಡುವ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :-**

೬೮೪ (೭೭೮) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಡ್ಯದ ಹೃದಯ ಭಾಗದಲ್ಲಿರುವ ತೋಟಗಾರಿಕೆ ಇಲಾಖೆಗೆ ಸೇರಿದ ಹಸಿರು ಜಾಗವನ್ನು ನ್ಯಾಯಾಲಯ ನಿರ್ಮಾಣ ಮಾಡಲು ಮಂಜೂರು ಮಾಡಿಕೊಡಬೇಕೆನ್ನುವ ನ್ಯಾಯಾಂಗ ಇಲಾಖೆಯ ಬೇಡಿಕೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸರ್ಕಾರ ತೋಟಗಾರಿಕೆ ಇಲಾಖೆಗೆ ಸೇರಿದ ಹಸಿರು ಜಾಗವನ್ನು ನ್ಯಾಯಾಂಗ ಇಲಾಖೆಗೆ ಮಂಜೂರು

ಮಾಡಿಕೊಟ್ಟಿದೆಯೇ ಅಥವಾ ಇಲ್ಲವೇ ; ಈ ಕುರಿತು ಸರ್ಕಾರದ ನಿಲುವೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಭೂಮಿ ಮಂಜೂರು ಮಾಡಿಕೊಟ್ಟಿದ್ದಲ್ಲಿ ಎಷ್ಟು ಎಕರೆ ವಿಸ್ತೀರ್ಣವನ್ನು ಮಂಜೂರು ಮಾಡಲಾಗಿದೆ ; (ವಿವರ ನೀಡುವುದು)

(ಈ) ಹಸಿರು ಭೂಮಿಯನ್ನು ಅನ್ಯ ಉದ್ದೇಶಗಳಿಗೆ ಮಂಜೂರು ಮಾಡುವ ಮುನ್ನ ಅನುಸರಿಸಬೇಕಾದ ನಿಯಮಗಳೇನು ?

## ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್ ನಿರ್ಮಿಸುವ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :-**

೬೮೫ (೮೪೪) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್ ನಿರ್ಮಿಸಲು ಸರ್ಕಾರದ ವತಿಯಿಂದ ಎಷ್ಟು ಎಕರೆ ಜಾಗವನ್ನು ಗುರುತಿಸಲಾಗಿದೆ ;

(ಆ) ಈ ಬ್ಯುಸಿನೆಸ್ ಪಾರ್ಕ್‌ನ್ನು ನಿರ್ಮಿಸಲು ಭೂಮಾಲೀಕರಿಂದ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಭೂಪರಿಹಾರ ವಿತರಿಸಲಾಗಿದೆಯೇ ;

(ಇ) ಸದರಿ ಪಾರ್ಕ್‌ನ್ನು ನಿರ್ಮಿಸುವ ಕಾರ್ಯವನ್ನು ಯಾವ ಗುತ್ತಿಗೆದಾರರಿಗೆ ಮತ್ತು ಎಷ್ಟು ಟೆಂಡರ್ ಮೊತ್ತಕ್ಕೆ ನೀಡಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಈ) ಸದರಿ ಪಾರ್ಕ್ ನಿರ್ಮಾಣದ ಅಂದಾಜು ಮೊತ್ತದ ಬಗ್ಗೆ ಮಾಹಿತಿ ಮತ್ತು ಯಾವ ಯಾವ ಸೌಕರ್ಯಗಳನ್ನು ಕಲ್ಪಿಸಲಾಗುವುದು ? (ಮಾಹಿತಿಯನ್ನು ಒದಗಿಸುವುದು)

## ಬೆಂಗಳೂರು ನಗರದ ಲಾಲ್‌ಬಾಗ್/ ಕಬ್ಬನ್ ಪಾರ್ಕ್ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :-**

೬೮೬ (೮೪೫) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ರಾಜಧಾನಿಯಲ್ಲಿರುವ ಲಾಲ್‌ಬಾಗ್/ಕಬ್ಬನ್ ಪಾರ್ಕ್ ಉದ್ಯಾನವನಗಳು ಪ್ರವಾಸಿಗರನ್ನು ಸುಮಾರು ದಶಕಗಳಿಂದ ಆಕರ್ಷಣೆಗೆ ಸೆಳೆಯುತ್ತಿದ್ದು, ಇತ್ತೀಚಿನ ದಿನಗಳಲ್ಲಿ ಸದರಿ ಉದ್ಯಾನವನಗಳಲ್ಲಿ ಅನೈತಿಕ ಚಟುವಟಿಕೆಗಳಾದ ಮದ್ಯ ಸೇವನೆ, ಹೆಣ್ಣು ಮಕ್ಕಳೊಂದಿಗೆ ಅಸಭ್ಯ ವರ್ತನೆ ಇತ್ಯಾದಿ ನಡೆಯುತ್ತಿರುವುದು ತೋಟಗಾರಿಕೆ ಇಲಾಖೆಯ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇಂತಹ ಕೃತ್ಯಗಳನ್ನು ತಡೆಗಟ್ಟಲು ಯಾವ ಕ್ರಮಗಳನ್ನು ಕೈಗೊಂಡಿದೆ ;

(ಆ) ಸದರಿ ಉದ್ಯಾನವನದಲ್ಲಿ ಇತ್ತೀಚಿನ ದಿನಗಳಲ್ಲಿ ಪ್ಲಾಸ್ಟಿಕ್ ಬಳಕೆ ಹೆಚ್ಚಾಗಿದ್ದು, ಪ್ಲಾಸ್ಟಿಕ್ ಮುಕ್ತ ಉದ್ಯಾನವನವನ್ನು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಹೊಸಕೋಟೆ ತಾಲ್ಲೂಕಿನಲ್ಲಿ ಫಿಲ್ಟರ್ ಮರಳು ಗಣಿಗಾರಿಕೆಯ ಕುರಿತು

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ.) (ವಿಧಾನಸಭೆಯಿಂದ ಚುನಾಯಿತರಾದವರು) :-**

೬೮೭ (೭೮೪) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಬೈಲನರಸಾಪುರ,ಹುಳುವನಹಳ್ಳಿ, ದೊಡ್ಡರಾಮನಹಳ್ಳಿ, ಬೀರಹಳ್ಳಿ

ಗ್ರಾಮಗಳಲ್ಲಿ ಹಾಗೂ ಸುತ್ತಮುತ್ತ ಅಕ್ರಮವಾಗಿ ಫಿಲ್ಟರ್ ಮರಳು ಗಣಿಗಾರಿಕೆಯಿಂದ ೬೦ ರಿಂದ ೭೦ ಅಡಿ ಗುಂಡಿ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಳೆದ ಮೂರು ವರ್ಷಗಳಲ್ಲಿ ಅಕ್ರಮ ಫಿಲ್ಟರ್ ಮರಳು ಗಣಿಗಾರಿಕೆ ನಡೆಸುತ್ತಿದ್ದ ಆರೋಪದ ಮೇಲೆ ಎಷ್ಟು ಜನರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಅಕ್ರಮ ಫಿಲ್ಟರ್ ಮರಳು ಗಣಿಗಾರಿಕೆ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಅಕ್ರಮ ಫಿಲ್ಟರ್ ಮರಳು ಗಣಿಗಾರಿಕೆ ಎಗ್ಗಿಲ್ಲದೆ ನಡೆಯುತ್ತಿದ್ದರೂ, ಸೂಕ್ತ ಕ್ರಮ ಕೈಗೊಳ್ಳದ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಬಡಾವಣೆ ನಿರ್ಮಾಣ ಶುಲ್ಕ ಸಂಗ್ರಹಣೆ ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೬೮೮ (೭೬೯) ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ ಬಡಾವಣೆ ನಿರ್ಮಾಣ ಮಾಡಲು ಅನುಮೋದನೆ ನೀಡಿ ಶುಲ್ಕ ಸಂಗ್ರಹಣೆ ಮಾಡಿರುವ ಮೊತ್ತವೆಷ್ಟು ;

(ಆ) ಸಂಗ್ರಹಣೆ ಮಾಡಿರುವ ಶುಲ್ಕವನ್ನು ಪ್ರಾಧಿಕಾರದ ಯಾವ ಕಾರ್ಯಗಳಿಗೆ ಬಳಕೆ ಮಾಡಲಾಗುತ್ತಿದೆ ;

(ಇ) ಸಂಗ್ರಹಣೆ ಮಾಡಿರುವ ಈ ಶುಲ್ಕವು ದುರುಪಯೋಗವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

## ರೈತರು ತೋಟಗಾರಿಕೆ ಬೆಳೆಯನ್ನು ಬೆಳೆಯುತ್ತಿರುವ ಕುರಿತು

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) :-**

೬೮೯ (೭೮೫) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ವಿಜಯಪುರ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದ ರೈತರು ತೋಟಗಾರಿಕೆ ಬೆಳೆಯುನ್ನು ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ತೋಟಗಾರಿಕೆ ಬೆಳೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲು ಹಾಗೂ ಬೆಳೆದ ಬೆಳೆಯನ್ನು ಸಂರಕ್ಷಿಸಲು, ಮಾರಾಟ ಮಾಡಲು ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಇ) ಪ್ರಸ್ತುತ ಸಾಲಿನಲ್ಲಿ ಈ ಎಲ್ಲಾ ತೋಟಗಾರಿಕೆ ಬೆಳೆಗಳ ಕಾರ್ಯಗಳಿಗೆ ಎಷ್ಟು ಅನುದಾನ ಒದಗಿಸಲಾಗಿದೆ ? (ವಿವರ ನೀಡುವುದು)

## ಹಜ್ ಯಾತ್ರೆಯ ಕುರಿತು

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) :-**

೬೯೦ (೭೮೬) ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ವಿಜಯಪುರ ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಸಂಖ್ಯೆ ಹೆಚ್ಚಿದು, ಪ್ರಸ್ತುತ ಸಾಲಿನಲ್ಲಿ ಹಜ್ ಪ್ರಯಾಣಕ್ಕಾಗಿ ಎಷ್ಟು ಅರ್ಜಿಗಳನ್ನು ಸಲ್ಲಿಸಲಾಗಿದೆ ; (ವಿವರ ನೀಡುವುದು)

(ಆ) ಅರ್ಜಿ ಸಲ್ಲಿಸಿದರಲ್ಲಿ ಎಷ್ಟು ಜನರನ್ನು ಆಯ್ಕೆ ಮಾಡಿ ಹಜ್ ಯಾತ್ರೆಗೆ ಕಳುಹಿಸಲಾಗಿದೆ ; (ವಿವರ ನೀಡುವುದು)

(ಇ) ಹೆಚ್ಚಿನ ಜನರನ್ನು ಹಜ್ ಯಾತ್ರೆಗೆ ಕಳುಹಿಸಲು ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುವುದೇ ?

## ಸಹಕಾರ ಬ್ಯಾಂಕ್‌ಗಳಲ್ಲಿ ರೈತರ ಬೆಳೆ ಸಾಲಗಳ ಕುರಿತು

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) :-**

೬೯೧ (೭೮೭) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ವಿಜಯಪುರ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಸಹಕಾರ ಬ್ಯಾಂಕ್‌ಗಳಲ್ಲಿ ಪ್ರಸ್ತುತ ಸಾಲಿನಲ್ಲಿ ಎಷ್ಟು ಜನ ರೈತರು ಬೆಳೆ ಸಾಲಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ ;

(ಆ) ಅವರುಗಳಲ್ಲಿ ಇದುವರೆಗೂ ಎಷ್ಟು ರೈತರಿಗೆ ಬೆಳೆ ಸಾಲ ನೀಡಲಾಗಿದೆ ; (ವಿವರ ನೀಡುವುದು)

(ಇ) ಸಹಕಾರ ಬ್ಯಾಂಕ್‌ಗಳಲ್ಲಿ ಬೆಳೆ ಸಾಲ ಪಡೆಯಲು ಇರುವ ಮಾನದಂಡಗಳೇನು ? (ವಿವರ ನೀಡುವುದು)

## ನಿಡಗುಂದಿ ಪಟ್ಟಣ ಪಂಚಾಯಿತಿ ವಾರ್ಡ್‌ಗಳಲ್ಲಿ ಸಿ.ಸಿ. ರಸ್ತೆ ಮತ್ತು ಒಳಚರಂಡಿಗಳ ಕುರಿತು

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) :-**

೬೯೨ (೭೮೮) ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ವಿಜಯಪುರ ಜಿಲ್ಲೆಯ ನಿಡಗುಂದಿ ಪಟ್ಟಣ ಪಂಚಾಯತಿಯ ವಾರ್ಡ್‌ಗಳಲ್ಲಿ ಸಿ.ಸಿ. ರಸ್ತೆ, ಚರಂಡಿ ಮತ್ತು ಒಳಚರಂಡಿಗಳನ್ನು ನಿರ್ಮಾಣ ಮಾಡಲಾಗಿದೆಯೇ ; (ವಿವರ ನೀಡುವುದು)

(ಆ) ಸಿ.ಸಿ. ರಸ್ತೆ, ಚರಂಡಿ ಮತ್ತು ಒಳಚರಂಡಿ ನಿರ್ಮಾಣ ಮಾಡಲು ಇನ್ನು ಎಷ್ಟು ವಾರ್ಡ್‌ಗಳು ಬಾಕಿ ಇವೆ ; ಇದಕ್ಕೆ ಎಷ್ಟು ಅನುದಾನದ ಅವಶ್ಯಕತೆ ಇದೆ ; (ವಿವರ ನೀಡುವುದು)

(ಇ) ಪ್ರಸ್ತುತ ಸಾಲಿನಲ್ಲಾದರೂ ಅನುದಾನ ಒದಗಿಸಿ ಬಾಕಿಯಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ವಿಜಯಪುರ ಜಿಲ್ಲೆಯ ಕಲ್ಲು ಗಣಿಗಾರಿಕೆಯಿಂದ ವಾರ್ಷಿಕ ತೆರಿಗೆಯ ಕುರಿತು

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) :-**

೬೯೩ (೭೮೯) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ವಿಜಯಪುರ ಜಿಲ್ಲೆ ವ್ಯಾಪ್ತಿಯಲ್ಲಿ ಪರವಾನಿಗೆ ಪಡೆದು ಕಲ್ಲು ಗಣಿಗಾರಿಕೆ ನಡೆಸುತ್ತಿರುವ ಕ್ರಷರ್‌ಗಳ ಸಂಖ್ಯೆ ಎಷ್ಟು ;

(ಆ) ಇವುಗಳಿಂದ ಸರ್ಕಾರಕ್ಕೆ ಪ್ರತಿ ವರ್ಷ ಎಷ್ಟು ರಾಜಸ್ವ ಬರುತ್ತಿದೆ ; (ವಿವರ ನೀಡುವುದು)

(ಇ) ಈ ಕ್ರಷರ್‌ಗಳ ಮಾಲೀಕರು ಪ್ರತಿ ವರ್ಷ ಸರಿಯಾಗಿ ತೆರಿಗೆಯನ್ನು ಪಾವತಿಸಿದ್ದಾರೆಯೇ ; ಬಾಕಿ ಏನಾದರೂ ಇದೆಯೇ ; (ಸಂಪೂರ್ಣ ವಿವರ ನೀಡುವುದು)

(ಈ) ಬಾಕಿ ಉಳಿಸಿಕೊಂಡಿರುವ ತೆರಿಗೆಯನ್ನು ಯಾವ ಕಾಲಮಿತಿಯೊಳಗಾಗಿ ವಸೂಲಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದು ?

## ಅಡಿಕೆ ಉತ್ಪನ್ನಗಳನ್ನು ಬಳಸಿಕೊಳ್ಳುವ ಕುರಿತು ವ್ಯಾಪಕ ಸಂಶೋಧನೆ ಮತ್ತು ಅವುಗಳ ಮೌಲ್ಯವರ್ಧನೆ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :-**

೬೯೪ (೮೦೯) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಎಲೆ ಚುಕ್ಕಿ ಮತ್ತು ಹಳದಿ ರೋಗ ಬಾಧೆಯಿಂದಾಗಿ ಆರ್ಥಿಕ ಸಂಕಷ್ಟಕ್ಕೀಡಾಗಿರುವ ಅಡಿಕೆ ಬೆಳೆಗಾರರಿಗೆ ನೆರವಾಗುವ ದೃಷ್ಟಿಯಿಂದ ಅಡಿಕೆ ಉತ್ಪನ್ನಗಳ ವ್ಯಾಪಕ ಸಂಶೋಧನೆ ಹಾಗೂ ಮೌಲ್ಯವರ್ಧನೆಗೆ ಸಂಬಂಧಿಸಿದಂತೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಆ) ವಿವಿಧ ಬಗೆಯ ಹಲವಾರು ಉತ್ಪನ್ನಗಳ ತಯಾರಿಕೆಯಲ್ಲಿ ಅಡಿಕೆ ಉತ್ಪನ್ನಗಳನ್ನು ವ್ಯಾಪಕವಾಗಿ ಬಳಸಿಕೊಳ್ಳುವ ಸಾಧ್ಯತೆಗಳ ಕುರಿತು ಸಂಶೋಧನೆ ಹಾಗೂ ಮೌಲ್ಯವರ್ಧನೆಗೆ ಉತ್ತೇಜನ ನೀಡುವುದಕ್ಕೆ ಕಳೆದ ಆರ್ಥಿಕ ವರ್ಷದಲ್ಲಿ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳೇನು ;

(ಇ) ಕಳೆದ ಆರ್ಥಿಕ ವರ್ಷದಲ್ಲಿ ಅಡಿಕೆ ಉತ್ಪನ್ನಗಳನ್ನು ವ್ಯಾಪಕವಾಗಿ ಬಳಸಿಕೊಳ್ಳುವ ಸಾಧ್ಯತೆಗಳ ಕುರಿತು ಸಂಶೋಧನೆ ಹಾಗೂ ಮೌಲ್ಯವರ್ಧನೆಗೆ ಉತ್ತೇಜನ ನೀಡುವ ಕಾರ್ಯಕ್ರಮ ಮತ್ತು ಯೋಜನೆಗಳಿಗೆ ವಿನಿಯೋಗಿಸಿರುವ ಅನುದಾನದ ವಿವರಗಳೇನು ?

## ಎಲೆ ಚುಕ್ಕಿ ಮತ್ತು ಹಳದಿ ರೋಗ ಬಾಧೆಯಿಂದ ಅಡಿಕೆ ತೋಟಗಳು ಹಾಳಾಗಿರುವ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :-**

೬೯೫ (೮೧೦) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಅಡಿಕೆ ತೋಟಗಳಿಗೆ ಹಬ್ಬಿರುವ ಎಲೆ ಚುಕ್ಕಿ ಮತ್ತು ಹಳದಿ ರೋಗ ಬಾಧೆಯಿಂದಾಗಿ ಅಡಿಕೆ ಬೆಳೆಗಾರರು ಆರ್ಥಿಕವಾಗಿ ಅತೀವ ಸಂಕಷ್ಟಕ್ಕೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸದರಿ ಎಲೆ ಚುಕ್ಕಿ ಮತ್ತು ಹಳದಿ ರೋಗ ಬಾಧೆಯಿಂದಾಗಿ ಎಷ್ಟು ವಿಸ್ತೀರ್ಣದ ಅಡಿಕೆ ತೋಟ ಇದುವರೆವಿಗೆ ಹಾನಿಗೀಡಾಗಿದೆ ಹಾಗೂ ಆರ್ಥಿಕ ನಷ್ಟದ ಅಂದಾಜಿನ ವಿವರಗಳೇನು ; (ಜಿಲ್ಲಾವಾರು ವಿವರ ನೀಡುವುದು)

(ಇ) ಎಲೆ ಚುಕ್ಕಿ ಮತ್ತು ಹಳದಿ ರೋಗ ಬಾಧೆಯನ್ನು ವೈಜ್ಞಾನಿಕವಾಗಿ ನಿಯಂತ್ರಿಸಲು ಮತ್ತು ಹಾನಿಗೀಡಾಗಿರುವ ಅಡಿಕೆ ತೋಟಗಳ ಪುನಃಶ್ಚೇತನಕ್ಕೆ ಸರ್ಕಾರ ಇದುವರೆವಿಗೂ ಕೈಗೊಂಡಿರುವ ಕ್ರಮಗಳೇನು ;

(ಈ) ಕಳೆದ ಆರ್ಥಿಕ ವರ್ಷದಲ್ಲಿ ಎಲೆ ಚುಕ್ಕಿ ಮತ್ತು ಹಳದಿ ರೋಗ ಬಾಧೆಯಿಂದಾಗಿ ಸಂಕಷ್ಟಕ್ಕೀಡಾಗಿರುವ ಅಡಿಕೆ ಬೆಳೆಗಾರರಿಗೆ ಸರ್ಕಾರ ನೀಡಿರುವ ಪರಿಹಾರದ ಮೊತ್ತ ಎಷ್ಟು ? (ವಿವರ ನೀಡುವುದು)

## ಸಹಕಾರ ಸಂಸ್ಥೆಗಳಿಂದ ರೈತರಿಗೆ ವಿತರಣೆಯಾಗಿರುವ ಸಾಲದ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :–**

೬೯೬ (೮೧೧) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸಹಕಾರ ಸಂಸ್ಥೆಗಳಿಂದ ರೈತರಿಗೆ ದೊರೆಯುತ್ತಿರುವ ಸಾಲ ಮತ್ತು ಇತರೆ ಸೌಲಭ್ಯಗಳು ಯಾವುವು ;

(ಆ) ರೈತರ ಫಲಾನುಭವಿಗಳಿಗೆ ಸದರಿ ಸಾಲ ಮತ್ತು ಸೌಲಭ್ಯಗಳನ್ನು ಪಡೆಯಲು ನಿಗಧಿಪಡಿಸಲು ಮಾನದಂಡ, ನಿಯಮ ಹಾಗೂ ಷರತ್ತುಗಳೇನು ; (ಆದೇಶಗಳ ಪ್ರತಿ ಒದಗಿಸುವುದು)

(ಇ) ಕಳೆದ ಆರ್ಥಿಕ ವರ್ಷದಲ್ಲಿ ಸಹಕಾರ ಸಂಸ್ಥೆಗಳಿಂದ ರೈತರಿಗೆ ವಿತರಣೆಯಾಗಿರುವ ಸಾಲದ ಒಟ್ಟು ಮೊತ್ತವೆಷ್ಟು ;

(ಈ) ಕಳೆದ ಆರ್ಥಿಕ ವರ್ಷದಲ್ಲಿ ಸಾಲ ಪಡೆಯಲು ಅರ್ಜಿ ಸಲ್ಲಿಸಿದ್ದ ಎಲ್ಲಾ ಅರ್ಹ ರೈತ ಫಲಾನುಭವಿಗಳಿಗೆ ಸಂಪೂರ್ಣವಾಗಿ ಸಾಲ ವಿತರಣೆಯಾಗಿದೆಯೇ ; ವಿತರಣೆಯಾಗಿರದಿದ್ದಲ್ಲಿ, ಅದಕ್ಕೆ ಕಾರಣಗಳೇನು ?

## ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ದೊರೆಯುತ್ತಿರುವ ಸಾಲ, ಸಹಾಯಧನ ಮತ್ತು ಇತರೆ ಸೌಲಭ್ಯಗಳ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :–**

೬೯೭ (೮೧೨) ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಸ್ತುತ ಯಾವೆಲ್ಲಾ ಉದ್ದಿಮೆಗಳು ಸಣ್ಣ ಕೈಗಾರಿಕೆಗಳ ವ್ಯಾಪ್ತಿಗೆ ಸೇರಿವೆ ; (ಪಟ್ಟಿ ಒದಗಿಸುವುದು)

(ಆ) ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಸರ್ಕಾರದಿಂದ ದೊರೆಯುವ ಸಾಲ, ಸಹಾಯಧನ ಮತ್ತು ಇತರೆ ಸೌಲಭ್ಯಗಳು ಯಾವುವು ;

(ಇ) ರಾಜ್ಯದಲ್ಲಿ ಕಳೆದ ಆರ್ಥಿಕ ವರ್ಷದಲ್ಲಿ ಹೊಸದಾಗಿ ಎಷ್ಟು ಸಣ್ಣ ಕೈಗಾರಿಕೆಗಳು ಸ್ಥಾಪನೆಯಾಗಿವೆ ಹಾಗೂ ಅವುಗಳಿಗೆ ದೊರೆಯುತ್ತಿರುವ ಸಾಲ, ಸಹಾಯಧನ ಮತ್ತು ಇತರ ಸೌಲಭ್ಯಗಳ ವಿವರಗಳೇನು ; (ಫಲಾನುಭವಿವಾರು ವಿವರ ನೀಡುವುದು)

(ಈ) ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಮಹಿಳಾ ಉದ್ದಿಮೆದಾರರಿಗೆ ಸರ್ಕಾರದಿಂದ ದೊರೆಯುವ ಹೆಚ್ಚುವರಿ ಮತ್ತು ವಿಶೇಷ ಸವಲತ್ತುಗಳು ಯಾವುವು ;

(ಉ) ಕಳೆದ ಆರ್ಥಿಕ ವರ್ಷದಲ್ಲಿ ಎಷ್ಟು ಜನ ಮಹಿಳಾ ಉದ್ದಿಮೆದಾರರಿಗೆ ಸರ್ಕಾರದಿಂದ ದೊರೆಯುವ ಹೆಚ್ಚುವರಿ ಮತ್ತು ವಿಶೇಷ ಸವಲತ್ತುಗಳು ದೊರೆತಿವೆ ? (ಫಲಾನುಭವಿವಾರು ಸಂಪೂರ್ಣವಾಗಿ ವಿವರ ನೀಡುವುದು)

## ೦೧ ವರ್ಷದಿಂದ ರಾಜ್ಯದಲ್ಲಿ ಆಗಿರುವ ಹೂಡಿಕೆ ಒಪ್ಪಂದಗಳು

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೬೯೮ (೭೫೨) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಒಂದು ವರ್ಷದಿಂದ ರಾಜ್ಯದಲ್ಲಿ ಆಗಿರುವ ಹೂಡಿಕೆ ಒಪ್ಪಂದಗಳು ಎಷ್ಟು; ಈ ಪೈಕಿ ಹೂಡಿಕೆಗೆ ಸರ್ಕಾರ ಅನುಮತಿ ನೀಡಿರುವ ಪ್ರಸ್ತಾವನೆಗಳು ಯಾವುವು ; (ಸಂಪೂರ್ಣ ವಿವರ ನೀಡುವುದು)

(ಆ) ಈ ಒಪ್ಪಂದಗಳಿಂದಾಗಿ ಸೃಷ್ಟಿಯಾಗಿರುವ ಮತ್ತು ಸೃಷ್ಟಿಯಾಗಲಿರುವ ಉದ್ಯೋಗವಕಾಶಗಳ ಸಂಖ್ಯೆ ಎಷ್ಟು ; (ಕೈಗಾರಿಕೆವಾರು ವಿವರ ನೀಡುವುದು)

(ಇ) ಬೆಂಗಳೂರು ಹೊರತುಪಡಿಸಿ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಹೂಡಿಕೆಗೆ ಹೆಚ್ಚು ಅವಕಾಶ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ನಗರ ಪ್ರದೇಶಗಳಲ್ಲಿ ಕಲುಷಿತ ನೀರನ್ನು ಸಂಸ್ಕರಣೆ ಮಾಡಲು ಶುಲ್ಕ ವಿಧಿಸುವ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :-**

೬೯ (೭೫೩) ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ನಗರ ಪ್ರದೇಶಗಳಲ್ಲಿ ಕಲುಷಿತ ನೀರಿನ ಸಂಸ್ಕರಣಾ ಸೇವೆಗಳಿಗಾಗಿ ಬಳಕೆದಾರರಿಗೆ ಶುಲ್ಕ ವಿಧಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಈ ಪ್ರಸ್ತಾವನೆಗೆ ಕಾರಣಗಳೇನು ;

(ಆ) ಈ ಪ್ರಸ್ತಾವನೆಗೆ ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಶಿಫಾರಸ್ಸು ಮಾಡಿರುವ ಅಂಶಗಳೇನು ;

(ಇ) ಶುಲ್ಕ ವಿಧಿಸುವುದರಿಂದ ಮಾಲಿನ್ಯಕಾರಕ ಅಂಶಗಳ ಬಿಡುಗಡೆ ತಡೆಯಲು ಸಾಧ್ಯವಾಗಲಿದೆಯೇ ; ಈ ಕುರಿತು ಅಧ್ಯಯನ ನಡೆದಿದೆಯೇ ;

(ಈ) ಕಲುಷಿತ ನೀರನ್ನು ಸಂಸ್ಕರಣೆ ಮಾಡಲು ಹಾಲಿ ಇರುವ ಸಂಸ್ಕರಣಾ ಘಟಕಗಳು ಯಾವುವು ; ಅವುಗಳ ಸಾಮರ್ಥ್ಯ ಎಷ್ಟು ; ಹೊಸ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಹಾಗೂ ಹಾಲಿ ಇರುವ ಘಟಕಗಳ ಸಾಮರ್ಥ್ಯ ಹೆಚ್ಚಳ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ರಾಜ್ಯ ಮತ್ತು ಜಿಲ್ಲಾ ಖನಿಜ ಅಭಿವೃದ್ಧಿ ನಿಗಮದ ಅನುದಾನ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೦೦ (೭೪೩) ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಎರಡು ವರ್ಷಗಳಲ್ಲಿ ದಾವಣಗೆರೆಯ ಜಗಳೂರು ವಿಧಾನ ಸಭಾ ಕ್ಷೇತ್ರಕ್ಕೆ ರಾಜ್ಯ ಮತ್ತು ಜಿಲ್ಲಾ ಖನಿಜ ಅಭಿವೃದ್ಧಿ ನಿಧಿಯಿಂದ ಒದಗಿಸಿರುವ ಅನುದಾನವೆಷ್ಟು ; (ವರ್ಷವಾರು ವಿವರ ನೀಡುವುದು)

(ಆ) ದಾವಣಗೆರೆಯ ಜಗಳೂರು ವಿಧಾನಸಭಾ ಕ್ಷೇತ್ರದ ಹುಚ್ಚಂಗಿಪುರ ಗ್ರಾಮದಲ್ಲಿ ರಾಜ್ಯ ಮತ್ತು ಜಿಲ್ಲಾ ಖನಿಜ ಅಭಿವೃದ್ಧಿ ನಿಧಿಯಿಂದ ಒದಗಿಸಿರುವ ಅನುದಾನದ ಮೂಲಕ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳಾವುವು ; (ವಿವರ ನೀಡುವುದು)

(ಇ) ರಾಜ್ಯ ಮತ್ತು ಜಿಲ್ಲಾ ಖನಿಜ ಅಭಿವೃದ್ಧಿ ನಿಧಿಯಿಂದ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಬಹುದು ? (ವಿವರ ನೀಡುವುದು)

## ಕೈಗಾರಿಕೆಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೦೧ (೭೪೪) ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಣ್ಣ ಕೈಗಾರಿಕೆ ಇಲಾಖೆಯು ಯಾವ ಯಾವ ಕೈಗಾರಿಕೆಗಳನ್ನು ಪ್ರಾರಂಭಿಸಲು ಅನುಮತಿಯನ್ನು ನೀಡುತ್ತದೆ ; (ವಿವರ ನೀಡುವುದು)

(ಆ) ಇಲಾಖೆಯು ಸಾ–ಮಿಲ್ಲುಗಳನ್ನು ಪ್ರಾರಂಭಿಸಲು ಅನುಮತಿಯನ್ನು ನೀಡುತ್ತದೆಯೇ ; ಯಾವ ನಿಯಮಗಳ ಅನ್ವಯ ಅನುಮತಿ ನೀಡಲಾಗುತ್ತದೆ ; (ವಿವರ ನೀಡುವುದು)

(ಇ) ವಸತಿ ಪ್ರದೇಶದಲ್ಲಿ ಯಾವ ಯಾವ ಕೈಗಾರಿಕೆಗಳನ್ನು ಪ್ರಾರಂಭಿಸಲು ಅನುಮತಿಯನ್ನು ನೀಡಲಾಗುತ್ತದೆ ; ಸಾ–ಮಿಲ್ಲುಗಳನ್ನು ಪ್ರಾರಂಭಿಸಲು ಅನುಮತಿ ಇದೆಯೇ ? (ವಿವರ ನೀಡುವುದು)

## ಜವಳಿ ಉತ್ಪಾದನೆ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೦೨ (೭೪೫) ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಬಟ್ಟೆ ಉತ್ಪಾದನೆ ಪ್ರಮಾಣವೆಷ್ಟು ; ಯಾವ ಯಾವ ರೀತಿಯ ಬಟ್ಟೆಗಳನ್ನು ರಾಜ್ಯದಲ್ಲಿ ಉತ್ಪಾದಿಸಲಾಗುತ್ತದೆ ; (ಬಟ್ಟೆವಾರು, ಬಟ್ಟೆಯ ಉತ್ಪಾದನೆ ಜಿಲ್ಲಾವಾರು ವಿವರ ನೀಡುವುದು)

(ಆ) ರಾಜ್ಯದಿಂದ ಎಷ್ಟು ಪ್ರಮಾಣದ ಬಟ್ಟೆ ರಫ್ತು ಆಗುತ್ತದೆ ; ಯಾವ ಯಾವ ದೇಶಗಳಿಗೆ ರಫ್ತು ಆಗುತ್ತಿದೆ ; (ವಿವರ ನೀಡುವುದು)

(ಇ) ಜವಳಿ ಉದ್ಯಮದಲ್ಲಿ ತೊಡಗಿರುವ ಉತ್ಪಾದಕರ ಸಂಖ್ಯೆ ಎಷ್ಟು ; ಎಷ್ಟು ಜನರಿಗೆ ಈ ಉದ್ಯಮವು ಉದ್ಯೋಗಾವಕಾಶವನ್ನು ಕಲ್ಪಿಸಿದೆ ; (ವಿವರ ನೀಡುವುದು)

(ಈ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಸದಸ್ಯರ ಸಂಖ್ಯೆ ಎಷ್ಟು ; ಕಳೆದ ೩ ವರ್ಷದಲ್ಲಿ ಎಷ್ಟು ಮೊತ್ತದ ಅನುದಾನವನ್ನು ನಿಗಮಕ್ಕೆ ಒದಗಿಸಲಾಗಿದೆ ; ಯಾವ ರೀತಿಯಲ್ಲಿ ವೆಚ್ಚ ಮಾಡಲಾಗಿದೆ ಹಾಗೂ ಸಂಶೋಧನೆಗೆ ಮಾಡಿರುವ ವೆಚ್ಚವೆಷ್ಟು ? (ವಿವರ ನೀಡುವುದು)

## ನಗರಾಭಿವೃದ್ಧಿ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳ ಭರ್ತಿ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೦೩ (೭೪೬) ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ನಗರಾಭಿವೃದ್ಧಿ ಇಲಾಖೆಯಲ್ಲಿ ಮಂಜೂರಾದ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು ; ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ; ಎಷ್ಟು ಹುದ್ದೆಗಳು ಖಾಲಿ ಇವೆ ; ಹುದ್ದೆಗಳ ಭರ್ತಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ; (ಜಿಲ್ಲಾವಾರು ವಿವರ ನೀಡುವುದು)

(ಆ) ಕಳೆದ ಮೂರು ವರ್ಷಗಳಲ್ಲಿ ಇಲಾಖೆವತಿಯಿಂದ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; ಸದರಿ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನವೆಷ್ಟು ? (ಜಿಲ್ಲಾವಾರು, ಕಾಮಗಾರಿವಾರು ವಿವರ ನೀಡುವುದು)

## ಎಸ್‌ಸಿ-ಎಸ್‌ಟಿ ಉದ್ದಿಮೆದಾರಿಗೆ ನಿಗದಿತ ಪ್ರಮಾಣ ಮೀಸಲಾತಿಯ ಬಗ್ಗೆ

**ಶ್ರೀ ಹೆಚ್.ಪಿ. ಸುಧಾಮ್ ದಾಸ್ (ನಾಮನಿರ್ದೇಶನ ಹೊಂದಿದವರು) :-**

೭೦೪ (೭೬೫) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಿನಾಂಕ : ೨೧.೦೩.೨೦೦೯ ರಿಂದ ಅನ್ವಯವಾಗುವಂತೆ ಎಸ್‌ಸಿ-ಎಸ್‌ಟಿ ಉದ್ದಿಮೆದಾರರಿಗೆ ನಿಗದಿತ ಪ್ರಮಾಣ ಮೀಸಲಿರಿಸಿ ಹಂಚಿಕೆ ಮಾಡುವುದಾಗಿ ಕೆಲವು ಕೈಗಾರಿಕಾ ಪ್ರದೇಶಗಳಲ್ಲಿ ಬೃಹತ್ ಕೈಗಾರಿಕೆಗಳಿಗೆ Bulk Land ಹಂಚಿಕೆ ಮಾಡಿದ್ದರಿಂದ ಮೀಸಲಾತಿಯಲ್ಲಿನ ಶೇಕಡವಾರು ಪ್ರಮಾಣ ಕಡಿಮೆಯಾಗಿದೆಯೇ ;

(ಆ) ಅಂತಹ ಪ್ರಕರಣದಲ್ಲಿ ಪಕ್ಕದ ಕೈಗಾರಿಕಾ ಪ್ರದೇಶಗಳಲ್ಲಿ ಶೇಕಡವಾರು ಕೊರತೆಯನ್ನು ಸರಿದೂಗಿಸಲಾಗುತ್ತಿದೆಯೇ ;

(ಇ) ೨೦೨೪ರ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಗೆ ನೀಡಿದ ಹೆಚ್ಚುವರಿ ಅಂಶಗಳ ಮಾಹಿತಿಯಲ್ಲಿ KIADB ಮಂಡಳಿಯು ತದನಂತರ ಹಂಚಿಕೆಗಾಗಿ ಪರಿಗಣಿಸುವ ಕೈಗಾರಿಕಾ ಪ್ರದೇಶಗಳಲ್ಲಿ ಪಾಲಿಸಲಾಗುತ್ತಿದೆ ಎಂದು ತಿಳಿಸಿರುವ ವಿವರಗಳ ಮಾಹಿತಿ ಒದಗಿಸುವುದು ?

## ಕೆಐಎಡಿಬಿ ಮಂಡಳಿಯಲ್ಲಿ ನಿವೇಶನ ಹಂಚಿಕೆ ಪಡೆದ ಉದ್ದಿಮೆದಾರರ ಬಗ್ಗೆ

**ಶ್ರೀ ಹೆಚ್.ಪಿ. ಸುಧಾಮ್ ದಾಸ್ (ನಾಮನಿರ್ದೇಶನ ಹೊಂದಿದವರು) :-**

೭೦೫ (೭೬೪) ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸರ್ಕಾರದ ನಿರ್ಣಯದಂತೆ KIADB ಮಂಡಳಿಯಲ್ಲಿ ನಿವೇಶನ ಹಂಚಿಕೆ ಪಡೆದ ಉದ್ದಿಮೆದಾರರು ಸತತವಾಗಿ ೨ ವರ್ಷ ಯೋಜನೆ ಕಾರ್ಯಗತಗೊಳಿಸಿದ್ದರೆ ಕ್ರಯಪತ್ರ ವಿತರಿಸಬಹುದಾಗಿದೆಯೇ ;

(ಆ) ಈ ರೀತಿ ನಿರ್ಣಯವನ್ನು KSSID ನಿಗಮದಲ್ಲಿ ಜಾರಿಗೆ ತರಲು ಉದ್ದಿಮೆದಾರರಿಂದ ಮನವಿ ಸ್ವೀಕರಿಸಿದ್ದಲ್ಲಿ KIADB ಯಲ್ಲಿನ ತೀರ್ಮಾನದಂತೆ KSSID ನಿಗಮದಲ್ಲೂ ಜಾರಿಗೆ ತರಲು ಸರ್ಕಾರಕ್ಕೇನಾದರೂ ತೊಡಕುಗಳಿದ್ದಲ್ಲಿ ಅವುಗಳನ್ನು ನಿವಾರಿಸಿ ೨ ವರ್ಷ ಕಾರ್ಯಾರಂಭ ಮಾಡಿದ ಘಟಕಗಳಿಗೆ ಕ್ರಯಪತ್ರ ವಿತರಿಸಲು ತೆಗೆದುಕೊಂಡ ಕ್ರಮಗಳಾವುವು ? (ವಿವರ ಒದಗಿಸುವುದು)

## ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಲ್ಲಿ ಸರ್ಕಾರಿ ಆದೇಶದ ಉಲ್ಲಂಘನೆಯಾಗಿರುವ ಬಗ್ಗೆ

**ಶ್ರೀ ಹೆಚ್.ಪಿ. ಸುಧಾಮ್ ದಾಸ್ (ನಾಮನಿರ್ದೇಶನ ಹೊಂದಿದವರು) :-**

೭೦೬ (೭೬೬) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ ಸಿಪಿ-೨೧ SPI ೨೦೧೩ ಬೆಂಗಳೂರು ದಿನಾಂಕ: ೦೨.೦೧.೨೦೧೩ರ ಆದೇಶದಲ್ಲಿನ ಅಂಶಗಳ ಉಲ್ಲಂಘನೆ ಆಗಿದೆಯೇ ;

(ಆ) ಉಲ್ಲಂಘನೆ ಆಗಿದ್ದಲ್ಲಿ, ಅಂತಹ ಅಧಿಕಾರಿ/ನೌಕರರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ? (ವಿವರ ಒದಗಿಸುವುದು)

## ಎಸ್‌ಸಿ-ಎಸ್‌ಟಿ ಜನಾಂಗದವರಿಗೆ ಮೀಸಲಿರುವ ಕೈಗಾರಿಕಾ ಪ್ರದೇಶಗಳ ಹಂಚಿಕೆ ಬಗ್ಗೆ

**ಶ್ರೀ ಹೆಚ್.ಪಿ. ಸುಧಾಮ್ ದಾಸ್ (ನಾಮನಿರ್ದೇಶನ ಹೊಂದಿದವರು) :-**

೭೦೭ (೭೬೭) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಿನಾಂಕ: ೨೯.೧೦.೨೦೨೨ರಂದು ನಡೆದ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿನ ಸಭೆಯಲ್ಲಿನ ನಿರ್ಣಯದಂತೆ ಎಸ್‌ಸಿ-ಎಸ್‌ಟಿ ಜನಾಂಗದವರಿಗೆ ಮೀಸಲಿಟ್ಟಿರುವ ಕೈಗಾರಿಕಾ ಪ್ರದೇಶಗಳನ್ನು ಪರಿಶಿಷ್ಟರಿಗೆ ಹಂಚಿಕೆ ಮಾಡಿ ಉಂಟಾಗಿರುವ ಕೊರತೆಯನ್ನು (Shortfall) ಅಕ್ಕಪಕ್ಕದ ಕೈಗಾರಿಕಾ ಪ್ರದೇಶಗಳಲ್ಲಿ

ಒಂದು ಕಾಲಮಿತಿಯೊಳಗೆ ಸರಿದೂಗಿಸಲು ಆದೇಶಿಸಿದ್ದರೂ ನಿಖರ ಕೊರತೆ KIADB ಮಂಡಳಿಗೆ ಗೊತ್ತಿದ್ದರೂ ವಿವಿಧ ಕಾರಣಗಳಿಂದ KIADB ಮಂಡಳಿ ಮರು ಸ್ವಾಧೀನ ಪಡೆಯುವ ಅಥವಾ ಪರಿಶಿಷ್ಟ ಜಾತಿ/ಪಂಗಡದವರಿಗೆ ಹಂಚಿಕೆ ಮಾಡಲು ಸರ್ಕಾರಕ್ಕೆ ತೊಂದರೆ ಇದೆಯೇ ;

(ಆ) ಈ ಜನಾಂಗದವರಿಗೆ ಮೀಸಲಿರುವ ನಿವೇಶನಗಳನ್ನು ಇತರರಿಗೆ ಹಂಚಿಕೆ ಮಾಡಿರುವ ಅಧಿಕಾರಿ/ನೌಕರರನ್ನು ಗುರುತಿಸಿ ಶಿಸ್ತುಕ್ರಮ ಜರುಗಿಸಲು ತೆಗೆದುಕೊಂಡ ಕ್ರಮಗಳಾವುವು ? (ವಿವರಗಳನ್ನು ಒದಗಿಸುವುದು)

## KIADB ಮಂಡಳಿಯಲ್ಲಿ ಕೈಗಾರಿಕಾ ಪ್ರದೇಶಗಳ ಹಂಚಿಕೆ ಬಗ್ಗೆ

**ಶ್ರೀ ಹೆಚ್.ಪಿ. ಸುಧಾಮ್ ದಾಸ್ (ನಾಮನಿರ್ದೇಶನ ಹೊಂದಿದವರು) :-**

೭೦೮ (೭೬೮) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಿನಾಂಕ:೨೦.೦೩.೨೦೧೯ರವರೆಗೆ KIADB ಮಂಡಳಿಯಲ್ಲಿ ಎಷ್ಟು ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗಿದೆ ; (ಹಂಚಿಕೆಗೆ ಪರಿಗಣಿಸಿರುವ ವಿಸ್ತೀರ್ಣವನ್ನು ಕೈಗಾರಿಕಾ ಪ್ರದೇಶವಾರು ವಿವರಗಳನ್ನು ಒದಗಿಸುವುದು)

(ಆ) ದಿನಾಂಕ:೨೦.೦೩.೨೦೧೯ರ ಹಿಂದೆ KIADB ಮಂಡಳಿಯಲ್ಲಿ ಅಭಿವೃದ್ಧಿಪಡಿಸಿರುವ ಕೈಗಾರಿಕಾ ಪ್ರದೇಶಗಳಲ್ಲಿ ದಿನಾಂಕ :೧೩.೦೯.೨೦೧೪ರಂದು ಇದ್ದಂತೆ ತಕರಾರು ಇಲ್ಲದ ಎಷ್ಟು ಎಕರೆ ವಿಸ್ತೀರ್ಣದ ನಿವೇಶನಗಳು ಹಂಚಿಕೆಗೆ ಲಭ್ಯವಿತ್ತು ? (ಕೈಗಾರಿಕಾ ಪ್ರದೇಶವಾರು ವಿವರಗಳನ್ನು ಒದಗಿಸುವುದು)

## D.M.F ಹಣದ ಮತ್ತು ರಾಜಧನ ಸಂಗ್ರಹವಾಗುವ ಬಗ್ಗೆ

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೦೯ (೮೪೬) ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಡಿ.ಎಮ್.ಎಫ್ ನಿಂದ ಕಳೆದ ಮೂರು ವರ್ಷಗಳಲ್ಲಿ ಸರ್ಕಾರಕ್ಕೆ ಸಂದಾಯವಾದ ಹಣವೆಷ್ಟು ; ಈ ಡಿ.ಎಮ್.ಎಫ್ ಹಣದಲ್ಲಿ ಯಾವ ಯಾವ ಯೋಜನೆಗಳಾಗಿವೆ ಮತ್ತು ಇದಕ್ಕೆ ಖರ್ಚಾದ ಹಣವೆಷ್ಟು ; (ಕಳೆದ ಮೂರು ವರ್ಷಗಳ ಅವಧಿಯ ಮಾಹಿತಿ ನೀಡುವುದು)

(ಆ) ಸರ್ಕಾರ ಈ ಡಿ.ಎಮ್.ಎಫ್ ಹಣವನ್ನು ಉಪಯೋಗಿಸುವ ಅಧಿಕಾರವನ್ನು ವಿಧಾನಸಭಾ ಸದಸ್ಯರಿಗೆ ನೀಡಲಾಗಿದ್ದು, ವಿಧಾನ ಪರಿಷತ್ ಸದಸ್ಯರಿಗೆ ಈ ಹಣವನ್ನು ಉಪಯೋಗಿಸಲು ಅಧಿಕಾರ ನೀಡದಿರಲು ಕಾರಣವೇನು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಕಲ್ಲುಗಣಿಗಾರಿಕೆಗೆ ಪ್ರತಿ ಟನ್ನೇಜ್‌ಗೆ ಬೇರೆ ರಾಜ್ಯಗಳಲ್ಲಿ ರಾಜಧನ ಕಡಿಮೆಯಿದ್ದು, ನಮ್ಮ ರಾಜ್ಯದಲ್ಲಿ ಹೆಚ್ಚಿಗಿದ್ದು ಇದನ್ನು ಕಡಿಮೆ ಮಾಡಲು ಸರ್ಕಾರದ ಚಿಂತನೆ ಇದೆಯೇ ;

(ಈ) ಕಲ್ಲುಗಣಿಗಾರಿಕೆಗೆ ಸಂಬಂಧಿಸಿದಂತೆ ಪ್ರತಿ ಟನ್ನೇಜ್‌ಗೆ ಸಂಗ್ರಹವಾಗುವ ರಾಜಧನ ಎಷ್ಟು ? (ಮೂರು ವರ್ಷಗಳ ಜಿಲ್ಲಾವಾರು ಮಾಹಿತಿ ನೀಡುವುದು)

## ಕೃಷಿ ಮಾರುಕಟ್ಟೆ ನಿವೇಶನಗಳ ಬಗ್ಗೆ

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೧೦ (೮೪೭) ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಕೆಲ ಕೃಷಿ ಮಾರುಕಟ್ಟೆಗಳ ವ್ಯಾಪ್ತಿಯಲ್ಲಿ ಇರುವ ನಿವೇಶನಗಳನ್ನು ಖರೀದಿ/ಮಾರಾಟ ಮಾಡಲು ಕೃಷಿ ಮಾರುಕಟ್ಟೆ ನಿರ್ದೇಶಕರ ಅನುಮತಿ ಪಡೆಯುವುದು ಕಡ್ಡಾಯವಾಗಿದೆ ; ಇದರಿಂದ ವ್ಯಾಪಾರಸ್ಥರಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಸ್ಥಳೀಯ ಚುನಾಯಿತ ಕೃಷಿ ಮಾರುಕಟ್ಟೆ ಕಮಿಟಿಗೆ ಈ ಅಧಿಕಾರ ಕೊಡುವ ಕುರಿತು ಚಿಂತನೆ ಸರ್ಕಾರಕ್ಕೆ ಇದೆಯೇ ;

(ಆ) ಸ್ಥಳೀಯ ಕೃಷಿ ಮಾರುಕಟ್ಟೆ ಸಮಿತಿಯ ವ್ಯಾಪ್ತಿಯಲ್ಲಿ ವ್ಯಾಪಾರಸ್ಥರಿಗೆ ತಮ್ಮ ಆಸ್ತಿಗಳ ಮೇಲೆ ಸಾಲ ಪಡೆದು ವ್ಯವಹರಿಸಲು ನಿರ್ಬಂಧ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ನಿರ್ಬಂಧಗಳನ್ನು ತೆರವುಗೊಳಿಸಲು ಸರ್ಕಾರವು ಕೈಗೊಂಡ ಕ್ರಮಗಳಾವುವು ; (ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ಇರುವ ಕೃಷಿ ಮಾರುಕಟ್ಟೆ ಸಮಿತಿಗಳಿಂದ ಸಂಗ್ರಹವಾಗುವ ಸೆಸ್ ಎಷ್ಟು ; (ಜಿಲ್ಲಾ ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ನಿಗದಿ ಮಾಡಿದ ಗುರಿಗಿಂತ ಹೆಚ್ಚಿನ ಸೆಸ್ ಸಂಗ್ರಹ ಮಾಡಿದ ಕೃಷಿ ಮಾರುಕಟ್ಟೆ ಸಮಿತಿಗಳಿಗೆ ಇಲಾಖೆಯಿಂದ ನೀಡಲಾದ ಸೌಲಭ್ಯಗಳಾವುವು ; (ಮಾಹಿತಿ ನೀಡುವುದು)

(ಉ) ಅತಿ ಹೆಚ್ಚು ಸೆಸ್ ಸಂಗ್ರಹ ಮಾಡುವ ಕೃಷಿ ಮಾರುಕಟ್ಟೆ ಸಮಿತಿ ಆವರಣಗಳಲ್ಲಿ ಇಲಾಖೆಯಿಂದ ರೈತರಿಗೆ ಕಡಿಮೆ ದರದಲ್ಲಿ ಊಟ ಉಪಹಾರದ ವ್ಯವಸ್ಥೆ ಮಾಡಲಾಗಿದೆಯೇ ; ಇಲ್ಲದಿದ್ದಲ್ಲಿ, ಈ ರೀತಿಯ ವ್ಯವಸ್ಥೆ ಒದಗಿಸಲು ಸರ್ಕಾರದ ಮುಂದೆ ಚಿಂತನೆ ಇದೆಯೇ ;

(ಊ) ಹೆಚ್ಚು ವ್ಯವಹಾರ ಮಾಡುವ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ವ್ಯಾಪಾರಸ್ಥರಿಗೆ ನಿವೇಶನ ಸಮಸ್ಯೆ ಮತ್ತು ರೈತರ ಗಾಡಿಗಳನ್ನು ನಿಲ್ಲಿಸಲು ಪಾರ್ಕಿಂಗ್ ಸಮಸ್ಯೆ ಇದ್ದು, ಹೆಚ್ಚುವರಿ ನಿವೇಶನ ನೀಡುವ ಮತ್ತು ಟ್ರಕ್ ಟರ್ಮಿನಲ್ ಸ್ಥಾಪಿಸುವ ಬಗ್ಗೆ ಸರ್ಕಾರಕ್ಕೆ ಚಿಂತನೆ ಇದೆಯೇ ;

(ಋ) ನೆರೆಯ ಆಂಧ್ರ ಮತ್ತು ತೆಲಂಗಾಣ ರಾಜ್ಯದಲ್ಲಿ ತಿಂಗಳಿಗೊಮ್ಮೆ ಸೆಸ್ ಪಾವತಿ ಮಾಡುವ ವ್ಯವಸ್ಥೆ ಇದ್ದು, ಕರ್ನಾಟಕ ರಾಜ್ಯದ ಕೆಲ ಕೃಷಿ ಮಾರುಕಟ್ಟೆ ಸಮಿತಿಯಲ್ಲಿ ವಾರಕ್ಕೊಮ್ಮೆ ಕಡ್ಡಾಯ ಸೆಸ್ ಪಾವತಿಯ ವ್ಯವಸ್ಥೆ ಇದ್ದು, ತಪ್ಪಿದ್ದಲ್ಲಿ, ೧೦% ಹೆಚ್ಚುವರಿ ದಂಡ ಕಟ್ಟಬೇಕಾದ ವ್ಯವಸ್ಥೆ ಜಾರಿಯಲ್ಲಿರುವುದರಿಂದ ಸೆಸ್ ಕಟ್ಟಲು ವ್ಯಾಪಾರಸ್ಥರು ತೀವ್ರ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ನೆರೆಯ ರಾಜ್ಯಗಳ ರೀತ್ಯಾ ತಿಂಗಳಿಗೆ ಒಮ್ಮೆ ಸೆಸ್ ಪಾವತಿ ವಿಧಾನ ಅಳವಡಿಸುವ ಕುರಿತು ಚಿಂತನೆ ಸರ್ಕಾರಕ್ಕಿದೆಯೇ ? (ಮಾಹಿತಿ ನೀಡುವುದು)

## ಮುಖ್ಯಮಂತ್ರಿ ಸಾಲಮನ್ನಾ ಯೋಜನೆ ಮತ್ತು ಯಶಸ್ವಿನಿ ಯೋಜನೆಗಳ ಬಗ್ಗೆ

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೧೧ (೮೪೮) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮುಖ್ಯಮಂತ್ರಿ ಸಾಲಮನ್ನಾ ಯೋಜನೆಯಡಿ ಸಾಲಮನ್ನಾ ಮಾಡಲಾದ ಎಷ್ಟು ಫಲಾನುಭವಿ ರೈತರ ಖಾತೆಗೆ ಈವರೆಗೆ ಹಣ ಜಮೆ ಆಗಿದೆ ; ಜಮೆ ಆಗಿರುವ ಫಲಾನುಭವಿ ರೈತರ ಸಂಖ್ಯೆ ಎಷ್ಟು ; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

(ಆ) ಯಶಸ್ವಿನಿ ಯೋಜನೆ ಯಾವ ದಿನಾಂಕದಿಂದ ರಾಜ್ಯದಲ್ಲಿ ಮರುಜಾರಿಯಾಗಿದೆ ಹಾಗೂ ಯೋಜನೆ ಮರುಜಾರಿಯಾದ ಮೇಲೆ ಎಷ್ಟು ಜನ ರೈತ ಫಲಾನುಭವಿಗಳು ತಮ್ಮ ಹೆಸರು ನೋಂದಾಯಿಸಿಕೊಂಡಿದ್ದಾರೆ ; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ಈ ಯೋಜನೆಗೆ ಸೇರ್ಪಡೆಯಾಗಲು ಇರುವ ಮಾನದಂಡಗಳೇನು ; ಈ ಯೋಜನೆಯಿಂದ ಯಾವ ಯಾವ ಖಾಯಿಲೆಗಳಿಗೆ ಚಿಕಿತ್ಸೆ ನೀಡಲಾಗುತ್ತದೆ ; ಇದಕ್ಕಾಗಿ ಇರುವಂತಹ ನೋಂದಾಯಿತ ಆಸ್ಪತ್ರೆಗಳು ಯಾವುವು ; (ರಾಜ್ಯ ಹಾಗೂ ಹೊರ ರಾಜ್ಯದ ಆಸ್ಪತ್ರೆಗಳ ಪಟ್ಟಿ ನೀಡುವುದು)

(ಈ) ಈ ಯೋಜನೆಯಿಂದ ಕಳೆದ ಒಂದು ವರ್ಷದಲ್ಲಿ ಎಷ್ಟು ಫಲಾನುಭವಿಗಳು ಸೌಲಭ್ಯ ಪಡೆದುಕೊಂಡಿದ್ದಾರೆ ; ಅದರ ಮೊತ್ತ ಎಷ್ಟು ಮತ್ತು ಇದಕ್ಕಾಗಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಎಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

## ಕಲಬುರಗಿ ಜಿಲ್ಲೆಯಲ್ಲಿ "ಮೆಗಾ ಟೆಕ್ಸ್‌ಟೈಲ್ ಪಾರ್ಕ್" ನಿರ್ಮಾಣದ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) :-**

೭೧೨ (೮೦೫) ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲ್ಯಾಣ ಕರ್ನಾಟಕ ಭಾಗದ ವ್ಯಾಪ್ತಿಗೆ ಬರುವ ಕಲಬುರಗಿ ಜಿಲ್ಲೆಯಲ್ಲಿ ಸ್ಥಾಪಿಸಲಾಗುತ್ತಿರುವ " ಮೆಗಾ ಟೆಕ್ಸ್‌ಟೈಲ್ ಪಾರ್ಕ್ "ನ ವಿಸ್ತೃತ ಯೋಜನಾ ವರದಿಯನ್ನು ನೀಡುವುದು ;

(ಆ) ಈ "ಮೆಗಾ ಟೆಕ್ಸ್‌ಟೈಲ್ ಪಾರ್ಕ್" ನಿರ್ಮಾಣದಿಂದ ಎಷ್ಟು ಪ್ರಮಾಣದ ಉದ್ಯೋಗವನ್ನು ನಿರೀಕ್ಷಸಬಹುದಾಗಿದೆ ; ಈ ಯೋಜನೆಗೆ ಮೀಸಲಿಟ್ಟ ಅನುದಾನ ಎಷ್ಟು ;

(ಇ) ಈ "ಮೆಗಾ ಟೆಕ್ಸ್‌ಟೈಲ್ ಪಾರ್ಕ್" ನಿರ್ಮಾಣ ಕಾರ್ಯವನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು ?

## ಕಲಬುರಗಿ ರೈಲ್ವೆ ನಿಲ್ದಾಣವನ್ನು ರೈಲ್ವೆ ವಲಯವನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) :-**

೭೧೩ (೮೦೬) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ ರೈಲು ನಿಲ್ದಾಣವನ್ನು ರೈಲ್ವೆ ವಲಯವನ್ನಾಗಿ ಮೇಲ್ದರ್ಜೆಗೇರಿಸಬೇಕೆಂದು ಕಲ್ಯಾಣ ಕರ್ನಾಟಕ ಭಾಗದ ಬಹುದಿನಗಳ ಬೇಡಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕಲಬುರಗಿ ರೈಲು ನಿಲ್ದಾಣ ಸ್ಥಾಪನೆಯ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿದೆ ; ಸರ್ಕಾರದಿಂದ ಮತ್ತೊಮ್ಮೆ ಕೇಂದ್ರ ಸರ್ಕಾರಕ್ಕೆ ಮನವಿ/ ಪ್ರಸ್ತಾವನೆಯನ್ನು ಸಲ್ಲಿಸಲಾಗುತ್ತಿದೆಯೇ ; (ಮಾಹಿತಿ ನೀಡುವುದು)

(ಆ) ಕಲಬುರಗಿ ರೈಲು ನಿಲ್ದಾಣದಲ್ಲಿ ರೈಲ್ವೆ ಇಲಾಖೆಗೆ ಕಳೆದ ೨ ವರ್ಷಗಳಲ್ಲಿ ಎಷ್ಟು ಪ್ರಮಾಣದ ಆದಾಯ ಸಂಗ್ರಹವಾಗಿದೆ ;

(ಇ) ಒಂದು ರೈಲು ನಿಲ್ದಾಣವನ್ನು ರೈಲ್ವೆ ವಲಯುವನ್ನಾಗಿ ಮೇಲ್ದರ್ಜೆಗೇರಿಸಲು ಅನುಸರಿಸುವ ನಿಯುಮ ಹಾಗೂ ಮಾನದಂಡಗಳೇನು ?

## ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ಮಾರ್ಟ್ ಸಿಟಿಗಳು ಘೋಷಿಸುವ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) :-**

೭೧೪ (೮೫೦) ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ನಗರವನ್ನು ಸ್ಮಾರ್ಟ್ ಸಿಟಿ ಯೋಜನೆಗೆ ಒಳಪಡಿಸಲಾಗಿದೆ ; ಇದುವರೆಗೆ ಈ ಯೋಜನೆಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ಮೊತ್ತ ವೆಚ್ಚ ಮಾಡಲಾಗಿದೆ ; (ವಿವರ ನೀಡುವುದು)

(ಆ) ಸ್ಮಾರ್ಟ್ ಸಿಟಿ ಯೋಜನೆಯನ್ನು ಜನಸಂಖ್ಯೆ ವಿರಳ ಇರುವ ಸಣ್ಣ ಸಣ್ಣ ನಗರಗಳಿಗೆ ವಿಸ್ತರಿಸುವ ಕುರಿತು ಸರ್ಕಾರದ ನಿಲುವೇನು ?

## ಸಾರ್ವಜನಿಕ ಶಿಕ್ಷಣ ಇಲಾಖೆಯ ಲಿಪಿಕ ನೌಕರರ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) :-**

೭೧೫ (೮೫೧) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಯಿಸಿಕೊಂಡಿರುವ ಕರ್ನಾಟಕ ರಾಜ್ಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಲಿಪಿಕ ನೌಕರರ, ವಾಹನ ಚಾಲಕರ ಮತ್ತು ಡಿ ಗ್ರೂಪ್ ನೌಕರರ ಸಂಘವು ಅಸ್ತಿತ್ವದಲ್ಲಿದೆಯೇ ; ಹಾಗಿದ್ದಲ್ಲಿ, ಈ ಸಂಘವನ್ನು ಯಾವಾಗ ನೋಂದಾಯಿಸಲಾಯಿತು ; ಸಂಘದ ನೋಂದಣಿ ಪ್ರಮಾಣ ಪತ್ರವನ್ನು ನೀಡುವುದು ;

(ಆ) ಸದರಿ ಸಂಘವು ನೋಂದಣಿಯಾದ ದಿನಾಂಕದಿಂದ ಇಲ್ಲಿಯವರೆಗೆ ಅಸ್ತಿತ್ವದಲ್ಲಿದ್ದಲ್ಲಿ ಸಂಘಕ್ಕೆ ಸಂಬಂಧಿಸಿದ ಎಲ್ಲಾ ರೀತಿಯ ದಾಖಲೆಗಳನ್ನು ದೃಢೀಕರಿಸಿ ನೀಡುವುದು ;

(ಇ) ಸದರಿ ಸಂಘವನ್ನು ನೋಂದಣಿಯಾದ ದಿನಾಂಕದಿಂದ ಇಲ್ಲಿಯವರೆಗೆ ನವೀಕರಣ ಮಾಡಿಸಲಾಗಿದೆಯೇ ; ಇಲ್ಲಿಯವರೆಗೆ ಎಷ್ಟು ಬಾರಿ ಸಂಘವನ್ನು ನವೀಕರಿಸಬೇಕಾಗಿತ್ತು ; ಇಲ್ಲಿಯವರೆಗೂ ನವೀಕರಿಸದೇ ಈಗ ನವೀಕರಿಸಲಾಗಿದೆಯೇ ; ಹಾಗಿದ್ದಲ್ಲಿ, ಯಾವಾಗ ನವೀಕರಿಸಲಾಯಿತು ; ನವೀಕರಣದ ಸಮಯದಲ್ಲಿ

ಸಂಘದವರು ಸಲ್ಲಿಸಿರುವ ಎಲ್ಲಾ ದಾಖಲೆಗಳನ್ನು ಶುಲ್ಕ ಪಾವತಿಸಿರುವ ವಿವರಗಳನ್ನೊಳಗೊಂಡಂತೆ ಮಾಹಿತಿಯನ್ನು ನೀಡುವುದು ;

(ಈ) ಸಂಘದ ಬೈಲಾದ ಪ್ರಕಾರ ಕಾರ್ಯಕಾರಿ ಮಂಡಳಿ ಅಸ್ತಿತ್ವದಲ್ಲಿದೆಯೇ ; ಸದರಿ ಕಾರ್ಯಕಾರಿ ಮಂಡಳಿಗೆ ಚುನಾವಣೆ ನಡೆಸಲಾಗಿದೆಯೇ ; ನಡೆಸಿದ್ದಲ್ಲಿ, ಮಾಹಿತಿ ನೀಡುವುದು ; ಚುನಾವಣೆ ನಡೆಸಲಾಗದಿದ್ದಲ್ಲಿ ಚುನಾವಣೆ ನಡೆಸುವ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಮಾಹಿತಿ ನೀಡುವುದು)

## ಉತ್ತರ ಕನ್ನಡ ಜಿಲ್ಲೆಯ ಮರಳು ಗಣಿಗಾರಿಕೆ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) :-**

೭೧೬ (೮೫೨) ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಮರಳು ಗಣಿಗಾರಿಕೆ ನಡೆಸಲು ಎಷ್ಟು ಗುತ್ತಿಗೆಗಳನ್ನು ನೀಡಲಾಗಿದೆ ; ಯಾವ ಯಾವ ನದಿ ಪಾತ್ರಗಳಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ನೀಡಿದೆ ; (ಗುತ್ತಿಗೆದಾರರ ಹೆಸರು ಮತ್ತು ಸಂಪೂರ್ಣ ವಿವರದೊಂದಿಗೆ ಮಾಹಿತಿ ನೀಡುವುದು)

(ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅಕ್ರಮ ಮರಳು ಗಣಿಗಾರಿಕೆ ನಡೆಸಿದವರ ಮೇಲೆ ಎಷ್ಟು ದೂರುಗಳನ್ನು ಇಲಾಖೆವತಿಯಿಂದ ದಾಖಲಿಸಲಾಗಿದೆ ?

## ರಾಜ್ಯದಲ್ಲಿರುವ ಇಂದಿರಾ ಕ್ಯಾಂಟಿನ್‌ಗಳ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) :-**

೭೧೭ (೨೨೬) ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಎಷ್ಟು ನಗರಗಳಲ್ಲಿ ಇಂದಿರಾ ಕ್ಯಾಂಟಿನ್‌ಗಳು ಕಾರ್ಯನಿರ್ವಹಿಸುತ್ತಿವೆ ;

(ಆ) ಪ್ರಸ್ತುತ ಯಾವ ಯಾವ ನಗರದಲ್ಲಿ ಇಂದಿರಾ ಕ್ಯಾಂಟಿನ್‌ಗಳು ಸ್ಥಗಿತಗೊಂಡಿವೆ ;

(ಇ) ಪ್ರಸ್ತುತ ಉತ್ತರ ಕರ್ನಾಟಕದಲ್ಲಿ ಎಷ್ಟು ಇಂದಿರಾ ಕ್ಯಾಂಟಿನ್‌ಗಳು ಕಾರ್ಯನಿರ್ವಹಿಸುತ್ತಿವೆ ? (ಜಿಲ್ಲಾವಾರು ಮತ್ತು ನಗರವಾರು ಮಾಹಿತಿ ನೀಡುವುದು)

## ಕಲಬುರಗಿಯಲ್ಲಿ ನಿರಂತರ ನೀರು ಸರಬರಾಜು ಯೋಜನೆ ಬಗ್ಗೆ

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೧೮ (೭೪೭) ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿಯಲ್ಲಿ ನಿರಂತರ ನೀರು ಸರಬರಾಜು ಯೋಜನೆ ಕಾರ್ಯ ಯಾವ ದಿನಾಂಕದಿಂದ ಆರಂಭವಾಗಿದೆ ; ಈ ಯೋಜನೆಯ ಒಟ್ಟು ವೆಚ್ಚ ಎಷ್ಟು ;

(ಆ) ಈ ಯೋಜನೆಯ ಗುತ್ತಿಗೆಯನ್ನು ಯಾವ ಯಾವ ಕಂಪನಿಗೆ ಎಷ್ಟು ಮೊತ್ತಕ್ಕೆ ನೀಡಲಾಗಿದೆ ; ನಿಗಧಿಪಡಿಸಿದ ಅವಧಿಯಲ್ಲಿ ಈ ಕಾರ್ಯ ಮುಗಿಯದಿರಲು ಕಾರಣವೇನು ; ಇದಕ್ಕೆ ಹೊಣೆ ಯಾರು ; ಈಗ ಒಟ್ಟು ಎಷ್ಟು ಮನೆಗಳಿಗೆ ನೀರಿನ ಸಂಪರ್ಕ ಒದಗಿಸಲಾಗಿದೆ ; ಕಳಪೆ ಮಟ್ಟದ ಪೈಪುಗಳ ಬದಲಿಗೆ ಗುಣಮಟ್ಟದ ಪೈಪ್ ಅಳವಡಿಸಲಾಗಿದೆಯೇ ;

(ಇ) ಈ ಕಾರ್ಯನಿರ್ವಹಿಸುತ್ತಿರುವ ಎಲ್ ಅಂಡ್ ಟಿ ಕಂಪನಿಗೆ ಇದುವರೆವಿಗೆ ಎಷ್ಟು ದಂಡ ವಿಧಿಸಲಾಗಿದೆ ; ಸಾರ್ವಜನಿಕರಿಗೆ ಅನುಕೂಲವಾಗುವ ಅಭಿವೃದ್ಧಿಯ ಇಂತಹ ಕಾರ್ಯಗಳ ವಿಳಂಬಕ್ಕೆ ಕಾರಣರಾಗಿರುವವರನ್ನು ಕಪ್ಪು ಪಟ್ಟಿಗೆ ಸೇರಿಸುವ ಬಗ್ಗೆ ಯೋಚಿಸಲಾಗುವುದೇ ?

## ರಾಜ್ಯದ ಹಜ್ ಕಮಿಟಿ ನಿರ್ವಹಣೆ ಬಗ್ಗೆ

**ಶ್ರೀ ಕೆ. ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) :-**

೭೧೯ (೭೬೦) ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿನ ಹಜ್ ಕಮಿಟಿಯನ್ನು ಯಾವ ಕಾಯ್ದೆ ಅಡಿಯಲ್ಲಿ ರೂಪಿಸಲಾಗಿದೆ ; ಈ ಕಮಿಟಿಯ ಕಾರ್ಯವ್ಯಾಪ್ತಿ ಏನು ; (ಪೂರ್ಣ ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಹಜ್ ಕಮಿಟಿಯನ್ನು ರೂಪಿಸುವವರು ಯಾರು ಮತ್ತು ಈ ಕಮಿಟಿಯಲ್ಲಿರುವ ಸದಸ್ಯರನ್ನು ನೇಮಿಸುವ ಅಧಿಕಾರವನ್ನು ಯಾರು ಹೊಂದಿದ್ದಾರೆ ಮತ್ತು ಹಜ್ ಕಮಿಟಿಯಲ್ಲಿ ಈ ಸದಸ್ಯರ ಪಾತ್ರವೇನು ; (ಪೂರ್ಣ ಮಾಹಿತಿ ನೀಡುವುದು)

(ಇ) ರಾಜ್ಯದ ಹಜ್ ಯಾತ್ರಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ದೊರೆಯುತ್ತಿರುವ ನೆರವು ಮತ್ತು ಸವಲತ್ತುಗಳು ಯಾವುವು ? (ಪೂರ್ಣ ವಿವರ ನೀಡುವುದು)

## ಪೀಣ್ಯ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಬಗ್ಗೆ

**ಶ್ರೀ ಕೆ. ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) :-**

೭೨೦ (೭೬೧) ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದಲ್ಲಿರುವ ಪೀಣ್ಯ ಕೈಗಾರಿಕಾ ಪ್ರದೇಶ ಏಷ್ಯಾ ಖಂಡದಲ್ಲಿ ದೊಡ್ಡದೆನ್ನುವ ಹೆಗ್ಗಳಿಕೆ ಇರುವುದು ನಿಜವಲ್ಲವೆ ; (ಈ ಬಗ್ಗೆ ವಿವರ ನೀಡುವುದು)

(ಆ) ಪೀಣ್ಯ ಕೈಗಾರಿಕೆ ಪ್ರದೇಶದಲ್ಲಿ ಅತಿ ಸೂಕ್ಷ್ಮ ಸಣ್ಣ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳು ಮತ್ತು ವಸಾಹತುಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಈ ವರ್ಗದ ಕೈಗಾರಿಕೆಗಳ ಅಭಿವೃದ್ಧಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು ಸರ್ಕಾರದ ಕರ್ತವ್ಯವಲ್ಲವೇ ;

(ಇ) ಹಾಗಿದ್ದಲ್ಲಿ, ಮೂಲಭೂತ ಸೌಕರ್ಯಗಳಿಲ್ಲದೆ ಬಳಲುತ್ತಿರುವ ಪೀಣ್ಯ ಕೈಗಾರಿಕಾ ಪ್ರದೇಶವನ್ನು ಉನ್ನತೀಕರಿಸಲು ಸರ್ಕಾರ ಕೈಗೊಂಡಿರುವ ಯೋಜನೆಗಳು ಯಾವುವು ; (ಪೂರ್ಣ ಮಾಹಿತಿ ನೀಡುವುದು)

(ಈ) ರಾಜ್ಯದಲ್ಲಿ ತಲೆದೂರಿದ ಕೋವಿಡ್-೧೯ರ ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ಹಲವಾರು ಸಣ್ಣ ಕೈಗಾರಿಕೆಗಳು ಮುಚ್ಚಿಹೋಗಿದ್ದು, ಈ ಸಣ್ಣ ಕೈಗಾರಿಕೆಗಳನ್ನು ಪುನಃಶ್ಚೇತನಗೊಳಿಸಲು ಸರ್ಕಾರ ಕೈಗೊಂಡಿರುವ ಯೋಜನೆಗಳು ಯಾವುವು ? (ಪೂರ್ಣ ವಿವರ ನೀಡುವುದು)

## ರಾಜ್ಯದಲ್ಲಿ ಪ್ರಧಾನಮಂತ್ರಿ ಖನಿಜ ಕ್ಷೇತ್ರ (PMKKKY) ಕಲ್ಯಾಣ ಯೋಜನೆ ಬಗ್ಗೆ

**ಶ್ರೀ ಕೆ. ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) :-**

೨೨೧ (೭೬೨) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೇಂದ್ರ ಸರ್ಕಾರ ಪ್ರಧಾನಮಂತ್ರಿ ಖನಿಜ ಕ್ಷೇತ್ರ (PMKKKY) ಕಲ್ಯಾಣ ಯೋಜನೆಗೆ ತಿದ್ದುಪಡಿ ತಂದಿರುವ ಹೊಸ ಮಾರ್ಗಸೂಚಿಗಳು ಯಾವುವು ; (ಪೂರ್ಣ ವಿವರ ನೀಡುವುದು)

(ಆ) ಈ ಬದಲಾಗಿ ತಿದ್ದುಪಡಿ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ರಾಜ್ಯದಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ (DMFT) ಟ್ರಸ್ಟ್ ಮೂಲಕ ಇದುವರೆಗೂ ಸಂಗ್ರಹಿಸಲಾಗಿರುವ ನಿಧಿ ಎಷ್ಟು ಮತ್ತು ಈ ನಿಧಿಗೆ ತಕ್ಕಂತೆ ಕ್ರಿಯಾಯೋಜನೆ ರೂಪಿಸಿ ಮಂಜೂರಾತಿ ನೀಡಲಾಗಿದೆಯೇ ; (ಪೂರ್ಣ ಮಾಹಿತಿ ನೀಡುವುದು)

(ಈ) ಕೇಂದ್ರ ಸರ್ಕಾರದ ಹೊಸ ಮಾರ್ಗಸೂಚಿಯಂತೆ, ಹೊಸ ಯೋಜನೆಗಳನ್ನು ತಯಾರಿಸಿ ಮಂಜೂರಾತಿ ನೀಡಲು ಸಂಬಂಧಿಸಿದ ಇಲಾಖೆಗಳಿಗೆ ಸರ್ಕಾರ ಆದೇಶ ನೀಡುವುದೇ ? (ಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿ ಇ–ವಾಹನಗಳ ತಯಾರಿಕೆಗೆ ಕ್ಲೀನ್ ಮೊಬಿಲಿಟಿ ರೂಪಿಸುವ ಬಗ್ಗೆ

**ಶ್ರೀ ಕೆ. ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) :–**

೭೨೨ (೭೬೩) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೇಂದ್ರ ಸರ್ಕಾರ ಇ–ವಾಹನಗಳ ತಯಾರಿಕೆ ಮತ್ತು ಬಳಕೆಗೆ ತಯಾರಿಸಿರುವ ಯೋಜನೆಗಳು ಯಾವುವು ; (ಪೂರ್ಣ ಮಾಹಿತಿ ನೀಡುವುದು)

(ಆ) ಈ ಯೋಜನೆಗಳಡಿಯಲ್ಲಿ ರಾಜ್ಯ ಸರ್ಕಾರಕ್ಕೆ ದೊರೆತಿರುವ ನೆರವು ಮತ್ತು ಸವಲತ್ತುಗಳು ಯಾವುವು ; (ಪೂರ್ಣ ಮಾಹಿತಿ ನೀಡುವುದು)

(ಇ) ಸರ್ಕಾರ ಇತ್ತೀಚೆಗೆ ಕ್ಲೀನ್ ಮೊಬಿಲಿಟಿ (Clean Mobility) ಎನ್ನುವ ಬ್ಯಾನರ್ ಅಡಿ ಇ- ವಾಹನಗಳ ತಯಾರಿಕೆಗೆ ಸಹಾಯಧನ ಮತ್ತು ಇತರೆ ಸವಲತ್ತು ನೀಡುವ ಕೈಗಾರಿಕಾ ನೀತಿ ಹೊರತಂದಿದೆಯೇ ; ಹಾಗಿದಲ್ಲಿ, ಪೂರ್ಣ ಮಾಹಿತಿ ನೀಡುವುದು ?

## ಸಹಕಾರಿ ಬ್ಯಾಂಕುಗಳ ಸ್ಥಾಪನೆ ಕುರಿತು

**ಡಾ. ಯತೀಂದ್ರ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೨೩ (೭೮೨) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮೈಸೂರು ಜಿಲ್ಲೆಯು ಸಹಕಾರಿ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಹೊಂದಿದ್ದು, ಈ ಛಾಪನ್ನು ಮತ್ತಷ್ಟು ವಿಸ್ತರಿಸಲು ಹೊಸ ಸಹಕಾರಿ ಬ್ಯಾಂಕುಗಳ ಅವಶ್ಯಕತೆಯಿರುವುದರಿಂದ, ಮೈಸೂರಿನಲ್ಲಿ ನೂತನವಾಗಿ ಸಹಕಾರಿ ಬ್ಯಾಂಕುಗಳನ್ನು ಸ್ಥಾಪಿಸಲು ಸ್ವೀಕರಿಸಿದ ಪ್ರಸ್ತಾವನೆಗಳೆಷ್ಟು ; (ವರ್ಷವಾರು ಮತ್ತು ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)

(ಆ) ಈ ನೂತನ ಪ್ರಸ್ತಾವನೆಗಳಲ್ಲಿ ಈವರೆಗೆ ಎಷ್ಟು ಸಹಕಾರಿ ಬ್ಯಾಂಕುಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ ? (ಮಾಹಿತಿ ನೀಡುವುದು)

## ಎ.ಪಿ.ಎಂ.ಸಿ. ಗಳಿಂದ ಬರುವ ಆದಾಯದ ಕುರಿತು

**ಡಾ. ಯತೀಂದ್ರ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೨೪ (೭೮೩) ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ನೂತನ ಎ.ಪಿ.ಎಂ.ಸಿ. ಕಾಯ್ದೆಯಿಂದ ಎ.ಪಿ.ಎಂ.ಸಿ. ಗಳಿಗೆ ಆದಾಯ ಹೆಚ್ಚಿದೆಯೇ ; ಹೆಚ್ಚಿದ್ದಲ್ಲಿ, ಮಾಹಿತಿ ನೀಡುವುದು ;

(ಆ) ಈ ನೂತನ ಕಾಯ್ದೆಯಿಂದ ಆದಾಯ ಕಡಿಮೆಯಾಗಿದ್ದಲ್ಲಿ ಈ ನಷ್ಟವನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಇ) ಎ.ಪಿ.ಎಂ.ಸಿ.ಗಳನ್ನು ಮತ್ತಷ್ಟು ಸುಧಾರಣೆಗೊಳಿಸಲು ನೂತನ ಕಾಯ್ದೆಗೆ ತಿದ್ದುಪಡಿಯ ಅವಶ್ಯಕತೆಯಿದ್ದು, ಆ ರೀತಿಯ ತಿದ್ದುಪಡಿಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ? (ವಿವರ ನೀಡುವುದು)

## ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ಧನ ನೀಡುವ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೨೫ (೭೮೦) ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ್ ಜಿಲ್ಲೆ ವ್ಯಾಪ್ತಿಯಲ್ಲಿ ಸಣ್ಣ ಕೈಗಾರಿಕೆಗಳಿಂದ ಕಳೆದ ಒಂದು ವರ್ಷದಿಂದ ಎಷ್ಟು ಜನರಿಗೆ ಕೈಗಾರಿಕೆ ಉದ್ಯಮ ಪ್ರಾರಂಭಿಸಲು ಪ್ರೋತ್ಸಾಹಧನ ನೀಡಲಾಗಿದೆ ; (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

(ಆ) ಸಣ್ಣ ಕೈಗಾರಿಕೆ ಪ್ರಾರಂಭಿಸಲು ಇರುವ ಮಾನದಂಡಗಳೇನು ; ಮತ್ತು ಯಾವ ಯಾವ ಯೋಜನೆಗಳಿವೆ ? (ಮಾಹಿತಿ ನೀಡುವುದು)

## ಕರ್ನಾಟಕ ಗೃಹ ನಿರ್ಮಾಣ ಸಹಕಾರ ಸಂಘ, ಪೀಣ್ಯ, ಬೆಂಗಳೂರು ಇವರು ನಿರ್ಮಿಸಿರುವ ಬಡಾವಣೆಗಳ/ನಿವೇಶನಗಳ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೨೬ (೭೮೧) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ಗೃಹ ನಿರ್ಮಾಣ ಸಹಕಾರ ಸಂಘ, ಪೀಣ್ಯ, ಬೆಂಗಳೂರು ಇವರು ಯಾವ ಯಾವ ಜಾಗಗಳಲ್ಲಿ ಹಾಗೂ ಎಷ್ಟು ಬಡಾವಣೆಗಳನ್ನು ನಿರ್ಮಿಸಿರುತ್ತಾರೆ ಹಾಗೂ ಈ

ಬಡಾವಣೆಗಳಲ್ಲಿ ಈವರೆಗೆ ತನ್ನ ಸದಸ್ಯರಿಗೆ ಹಂಚಿರುವ ನಿವೇಶನಗಳ ಸಂಖ್ಯೆ ಎಷ್ಟು ; (ದಾಖಲೆಗಳೊಂದಿಗೆ ವಿವರವನ್ನು ನೀಡುವುದು)

(ಆ) ಸದರಿ ಸಂಘದ ವಿರುದ್ಧ ಸಹಕಾರ ಇಲಾಖೆಯಲ್ಲಿ ಈವರೆಗೆ ದಾಖಲಾಗಿರುವ ಪ್ರಕರಣಗಳು/ದೂರುಗಳ ಸಂಖ್ಯೆ ಎಷ್ಟು ಹಾಗೂ ಈ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು) (ಸದರಿ ಸಂಘವು ಪ್ರಾರಂಭಗೊಂಡ ನಂತರ ಈವರೆಗೆ ರಚಿಸಿಕೊಂಡಿರುವ ಎಲ್ಲಾ ಬೈಲಾ ನಿಯಮಗಳ ವಿವರದೊಂದಿಗೆ ಮಾಹಿತಿಯನ್ನು ನೀಡುವುದು)

(ಇ) ಸದರಿ ಸಂಘವು ತನ್ನ ಸದಸ್ಯರುಗಳಿಂದ ಈವರೆಗೆ ನಿವೇಶನಗಳ ಹಂಚಿಕೆಗಾಗಿ ಪಡೆದಿರುವ ಒಟ್ಟು ಠೇವಣಿ ಮೊತ್ತವೆಷ್ಟು ; (ಸದಸ್ಯವಾರು, ಠೇವಣಿ ಮೊತ್ತದ ವಿವರ ನೀಡುವುದು)

(ಈ) ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ. ನೆಲಗದರನಹಳ್ಳಿ ಗ್ರಾಮದಲ್ಲಿ ಭೂಸ್ವಾಧೀನಪಡಿಸಿಕೊಂಡಿರುವ ಜಮೀನುಗಳಿಗೆ ಸಂಬಂಧಿಸಿದಂತೆ ಈವರೆಗೆ ಯಾವ ಯಾವ ಭೂ ಮಾಲೀಕರಿಗೆ ಎಷ್ಟು ಮೊತ್ತವನ್ನು ಹಾಗೂ ಎಷ್ಟು ನಿವೇಶನಗಳನ್ನು ಪರಿಹಾರವನ್ನಾಗಿ ನೀಡಲಾಗಿರುತ್ತದೆ ಹಾಗೂ ಭೂಸ್ವಾಧೀನದ ಪರಿಹಾರ ಮೊತ್ತಕ್ಕೆ ಸಂಬಂಧಿಸಿದಂತೆ ಈ ಸಂಘದಿಂದ ಸರ್ಕಾರದಲ್ಲಿ ಒಟ್ಟು ಎಷ್ಟು ಮೊತ್ತವನ್ನು ಠೇವಣಿ ಇಡಲಾಗಿದೆ ? (ಈ ಬಗ್ಗೆ ಸಂಪೂರ್ಣ ವಿವರಗಳನ್ನು ನೀಡುವುದು)

## ಕೈಗಾರಿಕೆ ಸ್ಥಾಪನೆ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೨೭ (೭೯೪) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಹೊಸ ಕೈಗಾರಿಕೆಗಳ ಸ್ಥಾಪನೆಗೆ ಸರ್ಕಾರ ಕೈಗೊಂಡ ಕ್ರಮವೇನು ;

(ಆ) ಹೊಸ ಕೈಗಾರಿಕೆಗಳ ಸ್ಥಾಪನೆಗೆ ಸದರಿ ಜಿಲ್ಲೆಯಿಂದ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ ; ಬಂದಿದ್ದಲ್ಲಿ, ಮಾಹಿತಿ ನೀಡುವುದು ?

## ಕಾರ್ಖಾನೆಗಳ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೨೮ (೭೯೫) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ್ ಜಿಲ್ಲೆ ಹುಮನಾಬಾದ ತಾಲ್ಲೂಕಿನ ಕೈಗಾರಿಕಾ ಪ್ರದೇಶದ ಕಾರ್ಖಾನೆಗಳು ವಿಷ ಪೂರಿತ ತ್ಯಾಜ್ಯ ಬಿಡುಗಡೆಗೊಳಿಸುತ್ತಿರುವುದರಿಂದ ಪಶು, ಪಕ್ಷಿ ಮತ್ತು ಮಾನವ ಸಂಕುಲಕ್ಕೆ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ವಿಷಪೂರಿತ ತ್ಯಾಜ್ಯ ಬಿಡುಗಡೆಗೊಳಿಸುತ್ತಿರುವ ಕಾರ್ಖಾನೆಗಳ ಮಾಲೀಕರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ಪುರಸಭೆ ಮತ್ತು ನಗರಸಭೆ ಸದಸ್ಯರ ಗೌರವಧನ ಹೆಚ್ಚಳ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೨೯ (೭೯೬) ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪುರಸಭೆ ಮತ್ತು ನಗರಸಭೆ ಸದಸ್ಯರ ಗೌರವಧನ ಹೆಚ್ಚಳಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಸರ್ಕಾರ ಕ್ರಮ ಕೈಗೊಂಡಿದ್ದಲ್ಲಿ ಎಷ್ಟು ಗೌರವಧನ ಹೆಚ್ಚಳ ಮಾಡಲಾಗಿದೆ ; (ಮಾಹಿತಿ ನೀಡುವುದು)

(ಇ) ಯಾವ ಕಾಲಮಿತಿಯೊಳಗೆ ಸದಸ್ಯರ ಗೌರವಧನ ಹೆಚ್ಚಳ ಮಾಡಲಾಗುವುದು ?

## ನಗರಸಭೆಗೆ ಬಿಡುಗಡೆಯಾದ ಅನುದಾನದ ಕುರಿತು

**ಡಾ॥ ಚಂದ್ರಶೇಖರ್ ಬಸವರಾಜ ಪಾಟೀಲ್ (ಪದವೀಧರರ ಕ್ಷೇತ್ರ) :-**

೭೩೦ (೭೭೩) ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :-

ಬೀದರ್ ನಗರಸಭೆಗೆ ಕಳೆದ ೨ ವರ್ಷಗಳಿಂದ ಬಿಡುಗಡೆಯಾದ ಅನುದಾನವೆಷ್ಟು ; ಬಿಡುಗಡೆಯಾದ ಅನುದಾನದಲ್ಲಿ ಇಲ್ಲಿಯವರೆಗೆ ಯಾವ ಯಾವ ಕಾಮಗಾರಿಗೆ ಎಷ್ಟೆಷ್ಟು ಹಣ ಬಿಡುಗಡೆಯಾಗಿದೆ ಮತ್ತು ಬಾಕಿ ಉಳಿದ ಹಣವೆಷ್ಟು ? (ಸಂಪೂರ್ಣ ಮಾಹಿತಿ ನೀಡುವುದು)

## ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಪ್ರತಿಷ್ಠಿತ ಹಟ್ಟಿ ಚಿನ್ನದ ಗಣಿ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೩೧ (೮೫೩) ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಪ್ರತಿಷ್ಠಿತ ಹಟ್ಟಿ ಚಿನ್ನದ ಗಣಿ ಪಟ್ಟಣವನ್ನು ಕಂದಾಯ ಹೋಬಳಿ ಎಂದು ಘೋಷಿಸುವಂತೆ ಬೇಡಿಕೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು ;

(ಆ) ಒಂದು ಗ್ರಾಮ/ಪಟ್ಟಣವನ್ನು ಕಂದಾಯ ಹೋಬಳಿ ಎಂದು ಘೋಷಿಸಲು ಇರುವ ಮಾನದಂಡಗಳೇನು ; (ವಿವರ ನೀಡುವುದು)

(ಇ) ಹಟ್ಟಿ ಚಿನ್ನದ ಗಣಿ ಪಟ್ಟಣದ ಜನಸಂಖ್ಯೆ ಎಷ್ಟು ; ಜನಸಂಖ್ಯೆಯಾಧಾರಿತವಾಗಿ ಕಂದಾಯ ಹೋಬಳಿ ಎಂದು ಘೋಷಿಸಲು ಅವಕಾಶ ಇದೆಯೇ ; ಹಾಗಿದ್ದಲ್ಲಿ, ಹಟ್ಟಿ ಚಿನ್ನದ ಗಣಿ ಸದರಿ ನಿಯಮಗಳ ವ್ಯಾಪ್ತಿಯಲ್ಲಿ ಬರುತ್ತದೆಯೇ ; ಬಂದಲ್ಲಿ, ಕಂದಾಯ ಹೋಬಳಿ ಘೋಷಣೆಗೆ ವಿಳಂಬವೇಕೆ ? (ವಿವರ ನೀಡುವುದು)

## ತೋಟಗಾರಿಕೆ ಇಲಾಖೆಯಲ್ಲಿ ೨೦೨೩-೨೪ನೇ ಸಾಲಿಗೆ ಹನಿ ನೀರಾವರಿ ಯೋಜನೆಯಡಿ ಬಿಡುಗಡೆಯಾದ ಅನುದಾನ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೩೨ (೮೫೪) ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತೋಟಗಾರಿಕೆ ಇಲಾಖೆಯಲ್ಲಿ ೨೦೨೩-೨೪ನೇ ಸಾಲಿಗೆ ಹನಿ ನೀರಾವರಿ ಯೋಜನೆಯಡಿ ಬಿಡುಗಡೆಯಾದ ಅನುದಾನ ಎಷ್ಟು ; ಆ ಪೈಕಿ ಕೇಂದ್ರ ಮತ್ತು ರಾಜ್ಯದ ಪಾಲು ಎಷ್ಟು ; ಇದರಲ್ಲಿ ಭರಿಸಲಾದ ವೆಚ್ಚವೆಷ್ಟು ;

(ಆ) ೨೦೨೩-೨೪ನೇ ಸಾಲಿನಲ್ಲಿ ರಾಜ್ಯದಲ್ಲಿ ಹನಿ ನೀರಾವರಿ ಯೋಜನೆಯಡಿ ಹನಿ ನೀರಾವರಿ ಪದ್ಧತಿಯನ್ನು ಅವಳಡಿಸಿಕೊಂಡ ರೈತರ ಸಂಖ್ಯೆ ಎಷ್ಟು ; ಎಷ್ಟು ಎಕರೆಗೆ ಅಳವಡಿಸಲಾಗಿದೆ ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ಹನಿ ನೀರಾವರಿಯನ್ನು ಯಾವ ಯಾವ ಬೆಳೆಗಳಿಗೆ ಅಳವಡಿಸಲಾಗಿದೆ ? (ಬೆಳೆವಾರು ವಿವರ ನೀಡುವುದು)

## ಸಾರ್ವಜನಿಕ ಶಿಕ್ಷಣ ಇಲಾಖೆಯ ನೌಕರರ ಸಂಘದ ಕುರಿತು

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) :-**

೭೩೩ (೭೫೬) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಯಿಸಿಕೊಂಡಿರುವ ಕರ್ನಾಟಕ ರಾಜ್ಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಲಿಪಿಕ ನೌಕರರ, ವಾಹನ ಚಾಲಕರ ಮತ್ತು ಡಿ ಗುಂಪು ನೌಕರರ ಸಂಘವು ಅಸ್ತಿತ್ವದಲ್ಲಿದೆಯೇ ; ಹಾಗಿದ್ದಲ್ಲಿ, ಈ ಸಂಘವನ್ನು ಯಾವಾಗ ನೋಂದಾಯಿಸಲಾಯಿತು ; (ಸಂಘದ ನೋಂದಣಿ ಪ್ರಮಾಣ ಪತ್ರವನ್ನು ನೀಡುವುದು)

(ಆ) ಸದರಿ ಸಂಘವನ್ನು ನೋಂದಣಿಯಾದ ದಿನಾಂಕದಿಂದ ಇಲ್ಲಿಯವರೆಗೆ ನವೀಕರಣ ಮಾಡಿಸಲಾಗಿದೆಯೇ ; ಇಲ್ಲಿಯವರೆಗೆ ಎಷ್ಟು ಬಾರಿ ಸಂಘವನ್ನು ನವೀಕರಿಸಬೇಕಾಗಿತ್ತು ; ಯಾವಾಗ ನವೀಕರಿಸಲಾಯಿತು ; (ಮಾಹಿತಿ ನೀಡುವುದು)

(ಇ) ಸಂಘದ ಬೈಲಾದ ಪ್ರಕಾರ ಕಾರ್ಯಕಾರಿ ಮಂಡಳಿ ಅಸ್ತಿತ್ವದಲ್ಲಿದೆಯೇ ; ಸದರಿ ಕಾರ್ಯಕಾರಿ ಮಂಡಳಿಗೆ ಚುನಾವಣೆ ನಡೆಸಲಾಗಿದೆಯೇ ; ನಡೆಸಿದ್ದಲ್ಲಿ, ಮಾಹಿತಿ ನೀಡುವುದು ?

## ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ಕೊಳಚೆ ಪ್ರದೇಶಗಳ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) :-**

೭೩೪ (೭೫೪) ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿರುವ ಪುರಸಭೆ, ಪಟ್ಟಣ ಪಂಚಾಯಿತಿ ಮತ್ತು ನಗರಸಭೆಗಳ ವ್ಯಾಪ್ತಿಯಲ್ಲಿ ಬರುವ ಘೋಷಿತ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು ; ಹಾಗೂ ಅವು ಯಾವುವು ; ಇಲ್ಲಿ ವಾಸಿಸುತ್ತಿರುವ ಜನಸಂಖ್ಯೆ ಎಷ್ಟು ; (ಸಂಸ್ಥೆಗಳವಾರು ಮಾಹಿತಿ ನೀಡುವುದು)

(ಆ) ಈ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಹಕ್ಕಪತ್ರಗಳನ್ನು ನೀಡಲಾಗಿದೆಯೇ ; ನೀಡಿದ್ದಲ್ಲಿ ಕಳೆದ ೦೫ ವರ್ಷಗಳಲ್ಲಿ ಎಷ್ಟು ನಿವಾಸಿಗಳಿಗೆ ಹಕ್ಕುಪತ್ರ ಹಂಚಿಕೆ ಮಾಡಲಾಗಿದೆ ; (ಸಂಸ್ಥೆಗಳವಾರು ಮಾಹಿತಿ ನೀಡುವುದು)

(ಇ) ಹಕ್ಕುಪತ್ರಗಳನ್ನು ನೀಡದಿದ್ದಲ್ಲಿ, ಹಕ್ಕುಪತ್ರಗಳನ್ನು ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಮಾಹಿತಿ ನೀಡುವುದು)

## ಸಣ್ಣ ಕೈಗಾರಿಕೆ ಸ್ಥಾಪಿಸಲು ಇರುವಂತಹ ಮಾನದಂಡಗಳ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) :-**

೭೩೫ (೭೫೫) ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ, ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯಲ್ಲಿ ಸ್ಥಾಪನೆಯಾಗಿರುವ ನೋಂದಾಯಿತ ಸಣ್ಣ ಕೈಗಾರಿಕೆಗಳು ಯಾವುವು ; ಈ ಕೈಗಾರಿಕೆಗಳಿಂದ ಎಷ್ಟು ಜನರಿಗೆ ಉದ್ಯೋಗ ಲಭಿಸಿದೆ ; (ಮಾಹಿತಿ ನೀಡುವುದು)

(ಆ) ಬೆಂಗಳೂರು ಗ್ರಾಮಾಂತರ ಮತ್ತು ರಾಮಗನರ ಜಿಲ್ಲಾ ವ್ಯಾಪ್ತಿಯಲ್ಲಿ ಯಾವ ಯಾವ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಅವಕಾಶಗಳಿವೆ ; ಸಣ್ಣ ಕೈಗಾರಿಕೆಗಳಲ್ಲಿ ಒಂದು ಕೈಗಾರಿಕಾ ಪ್ರದೇಶ ಸ್ಥಾಪಿಸಲು ಇರುವಂತಹ ಮಾನದಂಡಗಳೇನು ; (ಸಂಪೂರ್ಣ ವಿವರ ನೀಡುವುದು)

(ಇ) ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದವರು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರದ ವತಿಯಿಂದ ಯಾವ ಯಾವ ಯೋಜನೆಗಳನ್ನು ರೂಪಿಸಿ ಅವರಿಗೆ ಸಾಲ ಸೌಲಭ್ಯ, ಸಹಾಯ ಧನ ನೀಡಲಾಗುತ್ತಿದೆ ? (ಸಂಪೂರ್ಣ ವಿವರ ನೀಡುವುದು)

## ಹಟ್ಟಿ ಚಿನ್ನದ ಗಣಿ ಪಟ್ಟಣದಲ್ಲಿ ಇಂದಿರಾ ಕ್ಯಾಂಟೀನ್ ಪ್ರಾರಂಭಿಸುವ ಬಗ್ಗೆ

**ಶ್ರೀ ಶರಣಗೌಡ ಎ. ಪಾಟೀಲ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) :-**

೭೩೬ (೭೪೯) ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಹಟ್ಟಿ ಚಿನ್ನದ ಗಣಿಯ ಅಧಿಸೂಚಿತ ಪ್ರದೇಶದಲ್ಲಿ (ಎನ್.ಎ.ಸಿ) ಮಾನ್ಯ ಮುಖ್ಯಮಂತ್ರಿಗಳ ಬಹು ಕನಸಿನ ಯೋಜನೆಯಾದ ಬಡ ಜನರ ಹಸಿವನ್ನು ನೀಗಿಸುವ ಇಂದಿರಾ ಕ್ಯಾಂಟೀನ್ ಮಾಡಲು ಸ್ಥಳಾವಕಾಶ ಮತ್ತು ಮೂಲಭೂತ ಸೌಕರ್ಯಕ್ಕೆ ಹಟ್ಟಿ ಚಿನ್ನದ ಗಣಿ ಕಂಪನಿಯ ಆಡಳಿತ ಮಂಡಳಿಯಿಂದ ಸ್ಥಳಾವಕಾಶ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಇಂದಿರಾ ಕ್ಯಾಂಟೀನ್ ಪ್ರಾರಂಭ ಮಾಡಲು ಹಟ್ಟಿ ಚಿನ್ನದ ಗಣಿ ಕಂಪನಿಯು ಸ್ಥಳಾವಕಾಶ ನೀಡಲು ಒಪ್ಪಿದೆಯೇ ;

(ಇ) ಹಾಗಿದ್ದಲ್ಲಿ, ಸದರಿ ಪ್ರಸ್ತಾವನೆಯು ಯಾವ ಹಂತದಲ್ಲಿದೆ ಎಂಬ ಮಾಹಿತಿಯನ್ನು ಒದಗಿಸುವುದು?

## ಸಹಕಾರ ಸಂಘಗಳ ಬಗ್ಗೆ

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) :-**

೭೩೭ (೮೨೨) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದಲ್ಲಿರುವ ಯಾವ ಯಾವ ಗೃಹ ನಿರ್ಮಾಣ ಸಹಕಾರ ಸಂಘಗಳು. ಸದಸ್ಯರುಗಳಿಂದ ಸುಮಾರು ೮೦ ರಿಂದ ೧೦೦ ಕೋಟಿ ವರೆಗೆ ಸಂಗ್ರಹಿಸಿ ಕಳೆದ ೧೫-೨೦ ವರ್ಷಗಳಿಂದ ನಿವೇಶನ ನೀಡದೆ ಅನರ್ಹ ಸದಸ್ಯರಿಗೆ ನಿವೇಶನ ನೀಡಿ ವಂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ವಂಚನೆ ಹಾಗೂ ಅವ್ಯವಹಾರದ ಮೇಲೆ ಯಾವ ಯಾವ ಸಂಘಗಳ ವಿರುದ್ಧ ತನಿಖೆ ಮಾಡಿ ತನಿಖಾ ವರದಿ ಹಾಗೂ ಆದೇಶಗಳನ್ನು ಹೊರಡಿಸಲಾಗಿದೆ ; (ಅವ್ಯವಹಾರಗಳ ಪೂರ್ಣ ವಿವರ ನೀಡುವುದು)

(ಇ) ಕಳೆದ ೧೫ ವರ್ಷಗಳಿಂದ ಅಭಿವೃದ್ಧಿದಾರರಿಗೆ ನೂರಾರು ಕೋಟಿ ಹಣ ನೀಡಿದ್ದರೂ ಅವರ ಜೊತೆ ಶಾಮೀಲಾಗಿ ಈವರೆವಿಗೂ ಹಣ ಪಡೆದಿರುವ ಬಡಾವಣೆಗಳಲ್ಲಿ ನಿವೇಶನ ನೀಡದೆ ವಂಚಿಸಿರುವ ಸಹಕಾರ ಸಂಘಗಳು ಯಾವುವು ; (ಪೂರ್ಣ ವಿವರ ನೀಡುವುದು)

(ಈ) ಕೋಟ್ಯಾಂತರ ರೂಪಾಯಿ ಅವ್ಯವಹಾರ ಎಸಗಿರುವ ಸಂಘಗಳನ್ನು ಕೂಡಲೇ ಅಮಾನತ್ತಿನಲ್ಲಿಟ್ಟು ಸರ್ಕಾರದಿಂದ ಆಡಳಿತಾಧಿಕಾರಿಗಳನ್ನು ನೇಮಿಸಿ, ಸಂಘದ ಎಲ್ಲಾ ಅರ್ಹ ಸದಸ್ಯರಿಗೆ ನಿವೇಶನ ಸಿಗುವಂತಾಗಲು ಕೈಗೊಳ್ಳುವ ಕ್ರಮವೇನು ;

(ಉ) ಈ ರೀತಿ ಕೋಟ್ಯಾಂತರ ರೂ ಅವ್ಯವಹಾರ ಎಸಗಿರುವ ಸಂಘಗಳ ವಿರುದ್ಧ ಸೂಕ್ತ ಕ್ರಮಕ್ಕಾಗಿ ಲೋಕಾಯುಕ್ತ ತನಿಖೆಗೆ ನೀಡಲು ಸರ್ಕಾರಕ್ಕೆ ಇರುವ ತೊಂದರೆ ಏನು ?

## ಕೆರೆಗಳಿಗೆ ಕೊಳಚೆ ನೀರು ಸೇರುವ ಬಗ್ಗೆ

**ಶ್ರೀ. ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೩೮ (೮೨೧) ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

(ಆ) ಈ ಕೆರೆಗಳ ಅಭಿವೃದ್ಧಿಗೆ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳು ಯಾವುವು ಹಾಗೂ ಕಳೆದ ೫ ವರ್ಷಗಳಲ್ಲಿ ಯಾವ ಯಾವ ಕೆರೆಗಳಿಗೆ ಯಾವ ಯಾವ ಕಾಮಗಾರಿಗೆ ಎಷ್ಟೆಷ್ಟು ಹಣವ್ಯಯಿಸಲಾಗಿದೆ ;

(ಇ) ನಗರ ಪ್ರದೇಶದ ಕೆರೆಗಳಿಗೆ ಕೊಳಚೆ ನೀರು ಸೇರುತ್ತಿರುವುದನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು ?

## ಸಕ್ಕರೆ ಕಾರ್ಖಾನೆಗಳ ಬಾಕಿ ಬಗ್ಗೆ

**ಶ್ರೀ. ಸಿ.ಎಸ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) :-**

೭೩೯ (೮೨೦) ಮಾನ್ಯ ಜವಳಿ, ಕಬ್ಬು, ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಒಟ್ಟು ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಮಾಹಿತಿ ಒದಗಿಸುವುದು)

(ಆ) ಕಬ್ಬು ಬೆಳೆಗಾರರಿಗೆ ನಿಗದಿಪಡಿಸಿರುವ ಬೆಂಬಲ ಬೆಲೆ ಎಷ್ಟು; ಇದು ತುಂಬಾ ಕಡಿಮೆ ಇರುವುದರಿಂದ ಬೆಂಬಲ ಬೆಲೆ ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು ;

(ಇ) ಯಾವ ಯಾವ ಸಕ್ಕರೆ ಕಾರ್ಖಾನೆಗಳು ರೈತರಿಗೆ ಎಷ್ಟೆಷ್ಟು ಬಾಕಿ ಹಣ ನೀಡಬೇಕಾಗಿರುತ್ತದೆ ; (ಕಾರ್ಖಾನೆವಾರು ಮಾಹಿತಿ ಒದಗಿಸುವುದು)

(ಈ) ಬಾಕಿ ಹಣವನ್ನು ಯಾವ ಕಾಲಮಿತಿಯೊಳಗೆ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು ?

## ತೆಂಗಿನ ರೋಗದ ಬಗ್ಗೆ

**ಶ್ರೀ. ಸಿ.ಎಸ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) :-**

೭೪೦ (೮೧೯) ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ತೆಂಗಿನ ಬೆಳೆಗಳಿಗೆ ವ್ಯಾಪಕವಾಗಿ ಬೆಂಕಿ ರೋಗ ಹಾಗೂ ನುಸಿ ಪೀಡೆ ಇತರೆ ರೋಗಗಳು ಹರಡಿದ್ದು, ಇವುಗಳ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮವೇನು ;

(ಆ) ರಾಜ್ಯದಲ್ಲಿ ತೆಂಗಿನ ಉತ್ಪನ್ನವಾದ ಕೊಬ್ಬರಿಗೆ ಸರಿಯಾದ ಬೆಂಬಲ ಬೆಲೆ ಇಲ್ಲದೆ ತೆಂಗು ಬೆಳೆಗಾರರು ಸಂಕಷ್ಟದಲ್ಲಿದ್ದು, ಪ್ರತಿ ಕ್ವಿಂಟಾಲ್ ಕೊಬ್ಬರಿಗೆ ಕನಿಷ್ಠ ಹದಿನೈದು ಸಾವಿರ ಬೆಂಬಲ ಬೆಲೆ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಬಡಾವಣೆ ನಿರ್ಮಾಣ

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೪೧ (೮೧೮) ಮಾನ್ಯ ನಗರಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಳೆದ 10 ವರ್ಷಗಳಿಂದೀಚೆಗೆ ಎಷ್ಟು ಬಡಾವಣೆಗಳಿಗೆ ಮಂಜೂರಾತಿ ನೀಡಲಾಗಿದೆ ; (ಬಡಾವಣೆಗಳ ಹೆಸರು, ನಿವೇಶನ ಸಂಖ್ಯೆ ಇತ್ಯಾದಿ ಪೂರ್ಣ ವಿವರ ನೀಡುವುದು)

(ಆ) ಮೇಲ್ಕಂಡ ಬಡಾವಣೆಗಳಿಗೆ ಮಂಜೂರಾತಿ ನೀಡುವಾಗ ವಿಧಿಸಿರುವ ಷರತ್ತುಗಳು ಹಾಗೂ ನಿಯಮಗಳಾವುವು ;

(ಇ) ಕಳೆದ 10 ವರ್ಷಗಳಿಂದ ಮಂಜೂರಾತಿ ನೀಡಿ ಎಷ್ಟು ಬಡಾವಣೆಗಳನ್ನು ರಚಿಸಲಾಗಿದೆ ; ಈ ನಿವೇಶನ ಹಂಚುವಾಗ ಅನುಸರಿಸಿರುವ ಮಾನದಂಡವೇನು ?

## ಮಂಗಳೂರು ಮಹಾನಗರ ಪಾಲಿಕೆಯ ಸಂಕೀರ್ಣಗಳು, ಮಾರುಕಟ್ಟೆ ಹಾಗೂ ಇತರ ಕಟ್ಟಡಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೪೨ (೮೨೮) ಮಾನ್ಯ ನಗರಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಗಳೂರು ಮಹಾನಗರ ಪಾಲಿಕೆಯ ಅಧೀನದಲ್ಲಿರುವ ವಾಣಿಜ್ಯ ಸಂಕೀರ್ಣಗಳು, ಮಾರುಕಟ್ಟೆ ಹಾಗೂ ಇತರ ಕಟ್ಟಡಗಳು ಎಷ್ಟು ;

(ಪ್ರಸ್ತುತ ಇರುವ ನಿರ್ಮಾಣವಾಗುತ್ತಿರುವ ಕಟ್ಟಡಗಳ ಸಹಿತ ಎಲ್ಲಾ ವಿವರ ನೀಡುವುದು)

(ಆ) ಮಹಾನಗರ ಪಾಲಿಕೆಯ ಅಧೀನದಲ್ಲಿರುವ ಎಲ್ಲಾ ಕಟ್ಟಡ ನಿರ್ಮಾಣಕ್ಕಾಗಿ ಹೂಡಿದ ಬಂಡವಾಳವೆಷ್ಟು ; ಸರ್ಕಾರ/ಪಾಲಿಕೆಯ ಹೂಡಿಕೆ ಮೊತ್ತವೆಷ್ಟು ; ಕಟ್ಟಡ ನಿರ್ಮಾಣಕ್ಕಾಗಿ ಯಾವ್ಯಾವ ಸಂಸ್ಥೆಗಳಿಂದ ಎಷ್ಟು ಸಾಲ ಮಾಡಲಾಗಿದೆ ; ಈ ಸಾಲವನ್ನು ಕ್ಲಿಪ್ತ ಸಮಯದಲ್ಲಿ ಮರುಪಾವತಿಸಲಾಗುತ್ತಿದೆಯೇ ; (ಕಟ್ಟಡವಾರು ವಿವರ ನೀಡುವುದು)

(ಇ) ಈ ಕಟ್ಟಡಗಳಲ್ಲಿ ಏಲಂ/ಟೆಂಡರ್/ಹರಾಜು ಮಾಡಬೇಕಾದ ಕಟ್ಟಡ/ಅಂಗಡಿ/ಮಾರುಕಟ್ಟೆಗಳು ಎಷ್ಟು ; ಎಲ್ಲಾ ಕಟ್ಟಡ/ಅಂಗಡಿ/ಮಾರುಕಟ್ಟೆಗಳನ್ನು ಕಾಲ ಕಾಲಕ್ಕೆ ಏಲಂ ಮಾಡಲಾಗಿದೆಯೇ ; ಇಲ್ಲದಿದ್ದಲ್ಲಿ, ಕಾರಣವೇನು ; (ವಿವರ ನೀಡುವುದು)

(ಈ) ಈ ರೀತಿಯ ಕಟ್ಟಡಗಳನ್ನು ನಿರ್ಮಿಸಿ ಕಟ್ಟಡ ಪೂರ್ಣಗೊಂಡಿದ್ದರೂ ಉದ್ಘಾಟನೆಯಾಗದ ಕಟ್ಟಡಗಳೆಷ್ಟು ಹಾಗೂ ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡದ ಕಟ್ಟಡಗಳೆಷ್ಟು ; ಇದಕ್ಕೆ ಕಾರಣಗಳೇನು ; ಕಟ್ಟಡ ಬಳಕೆಗೆ ತಡವಾಗುವಿಕೆ, ಸದರಿ ಕಟ್ಟಡಕ್ಕೆ ಪಡೆದ ಸಾಲ, ಇತ್ಯಾದಿ ಮರು ಪಾವತಿ ತಡವಾಗಿ ಪಾಲಿಕೆಗೆ ಹೆಚ್ಚುವರಿ ಹೊರೆಯಾಗುವುದಿಲ್ಲವೇ ; (ವಿವರ ನೀಡುವುದು)

(ಉ) ಹೊಸ ಕಟ್ಟಡಗಳನ್ನು ಕಟ್ಟಿದ್ದರೂ ಇಲಾಖೆಯ ಕಛೇರಿಗಳನ್ನು ಮಾರುಕಟ್ಟೆಗಳನ್ನು ಸ್ಥಳಾಂತರ ಮಾಡದಿರಲು ಕಾರಣವೇನು ; (ವಿವರ ನೀಡುವುದು)

(ಊ) ಮಹಾನಗರ ಪಾಲಿಕೆಯ ಅಧೀನದಲ್ಲಿರುವ ವಾಣಿಜ್ಯ ಸಂಕೀರ್ಣಗಳು, ಮಾರುಕಟ್ಟೆ ಹಾಗೂ ಇತರೆ ಕಟ್ಟಡಗಳು ಈ ಎಲ್ಲಾ ಕಟ್ಟಡಗಳಲ್ಲಿ ಮಹಡಿವಾರು ಕೋಣೆಗಳ, ಅಂಗಡಿಗಳ ಬಾಡಿಗೆ/ಲೀಸ್ ಮೊತ್ತವನ್ನು/ಶುಲ್ಕವನ್ನು ಹೇಗೆ ನಿಗಧಿಪಡಿಸಲಾಗಿದೆ ? (ಚಾಲ್ತಿ ನಿಯಮಗಳ ಸಹಿತ ವಿವರ ನೀಡುವುದು)

## ರಾಜ್ಯದಲ್ಲಿ ಕೈಗಾರಿಕಾ ಪ್ರದೇಶಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) :-**

೭೪೩ (೮೨೯) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ರಾಜ್ಯದಲ್ಲಿ ಕೆ.ಐ.ಎ.ಡಿ.ಬಿ ನಿಯಮಗಳೇನು ; ಅವು ಯಾವಾಗದಿಂದ ಜಾರಿಗೆ ಬಂದಿವೆ ; ತದನಂತರ ಇದುವರೆಗೂ ರಾಜ್ಯದಲ್ಲಿ ಎಷ್ಟು ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗಿದೆ ; ಸ್ವಾಧೀನಪಡಿಸಿಕೊಂಡ ಜಮೀನು ಎಷ್ಟು ; (ವರ್ಷವಾರು ವಿವರ ನೀಡುವುದು)

(ಆ) ಕರ್ನಾಟಕ ರಾಜ್ಯದಲ್ಲಿ ಕೆ.ಐ.ಎ.ಡಿ.ಬಿ ಯಿಂದ ನಿವೇಶನ/ಜಮೀನು ಪಡೆದವರು ಎಷ್ಟು ; ಕೈಗಾರಿಕೆ ಸ್ಥಾಪಿಸಿ, ಎಷ್ಟು ಬಂಡವಾಳ ಹೂಡಿದ್ದಾರೆ ; ಎಷ್ಟು ಮಂದಿಗೆ ಉದ್ಯೋಗ ಕೊಟ್ಟಿದ್ದಾರೆ ; (ವಿವರ ನೀಡುವುದು)

(ಇ) ಕೆ.ಐ.ಎ.ಡಿ.ಬಿ ಯಿಂದ ನಿವೇಶನ ಪಡೆದರೂ ಎಷ್ಟು ಉದ್ಯಮಿಗಳು ಇನ್ನೂ ಕೈಗಾರಿಕೆಗಳನ್ನು ಆರಂಭಿಸದಿರಲು ಕಾರಣವೇನು ; ಸರ್ಕಾರ ಈ ಕುರಿತು ಏನು ಕ್ರಮವಹಿಸಿದೆ ; (ಪೂರ್ಣ ವಿವರ ನೀಡುವುದು)

(ಈ) ಕೆ.ಐ.ಎ.ಡಿ.ಬಿ ಯಿಂದ ನಿವೇಶನ ಪಡೆದು ಹತ್ತು ವರ್ಷವಾದರೂ ಕೈಗಾರಿಕೆ ಸ್ಥಾಪನೆ ಮಾಡದವರು ಎಷ್ಟು ಮಂದಿ ಇದ್ದಾರೆ ; ನಿಗದಿತ ಅವಧಿಯಲ್ಲಿ ಕೈಗಾರಿಕೆ ಸ್ಥಾಪನೆ ಮಾಡದವರ ವಿರುದ್ಧ ಏನಾದರೂ ಕ್ರಮ ಆಗಿದೆಯೇ ; ಯಾರಿಂದ ಲಾದರೂ ನಿವೇಶನ ವಾಪಸ್ ಪಡೆದಿದ್ದಾರೆಯೇ ; (ಮಾಹಿತಿ ನೀಡುವುದು)

(ಉ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಕೆ.ಐ.ಎ.ಡಿ.ಬಿಯಿಂದ ನಿವೇಶನ/ಜಮೀನು ಪಡೆದವರ ಸಂಖ್ಯೆ ಎಷ್ಟು ; ಕೈಗಾರಿಕೆ ಸ್ಥಾಪಿಸಿ, ಎಷ್ಟು ಬಂಡವಾಳ ಹೂಡಿದ್ದಾರೆ ; ಎಷ್ಟು ಮಂದಿಗೆ ಉದ್ಯೋಗ ಕೊಟ್ಟಿದ್ದಾರೆ ? (ವಿವರ ನೀಡುವುದು)

## ಪೌರಾಡಳಿತ ಪ್ರದೇಶಗಳಲ್ಲಿ ವಾಹನ ನಿಲ್ದಾಣ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೪೪೪ (೮೩೦) ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ನಗರಸಭೆ, ಪುರಸಭೆಗಳು, ಪಟ್ಟಣ ಪಂಚಾಯತ್, ನಗರ ಪಂಚಾಯತ್ ವ್ಯಾಪ್ತಿಯಲ್ಲಿ ಪ್ಯಾಸೆಂಜರ್ ಮತ್ತು ಗೂಡ್ಸ್ ರಿಕ್ಷಾ ನಿಲ್ದಾಣಗಳು ಹಾಗೂ ಟ್ಯಾಕ್ಸಿ ನಿಲ್ದಾಣಗಳ ಸ್ಥಾಪನೆಗೆ ಇರುವ ಮಾನದಂಡಗಳು ಹಾಗೂ ನಿಯಮಗಳೇನು ; ಈ ನಿಲ್ದಾಣ ಸ್ಥಾಪನೆಗೆ ಸಕ್ಷಮ ಪ್ರಾಧಿಕಾರ ಹಾಗೂ ನಿಯಂತ್ರಣಾಧಿಕಾರಿಗಳು ಯಾರು ; ವಾಹನ ಹಾಗೂ ನಿಲ್ದಾಣಗಳ ನೈಜತೆಯ ಕುರಿತು ವಾರ್ಷಿಕ ತಪಾಸಣೆಯನ್ನು ಯಾವಾಗ ಮಾಡಲಾಗುತ್ತಿದೆ ; (ವಿವರ ನೀಡುವುದು)

(ಆ) ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿರುವ ಅಧಿಕೃತ ಹಾಗೂ ಅನಧಿಕೃತ ಅಟೋ, ಪ್ಯಾಸೆಂಜರ್ ಮತ್ತು ಗೂಡ್ಸ್ ರಿಕ್ಷಾ ನಿಲ್ದಾಣಗಳು ಹಾಗೂ ಟ್ಯಾಕ್ಸಿ ನಿಲ್ದಾಣಗಳ ಸಂಖ್ಯೆಯೆಷ್ಟು ; ಇವುಗಳಿಗೆ ಪರವಾನಿಗೆಯನ್ನು ಯಾವ ಮಾನದಂಡದ ಆಧಾರದ ಮೇಲೆ ನೀಡಲಾಗಿದೆ ; (ತಾಲ್ಲೂಕುವಾರು, ನಿಲ್ದಾಣಗಳ ಸ್ಥಳಗಳ ಹೆಸರಿನೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

(ಇ) ನಗರಸಭೆ, ಪುರಸಭೆಗಳು, ಪಟ್ಟಣ ಪಂಚಾಯತ್, ನಗರ ಪಂಚಾಯತ್ ವ್ಯಾಪ್ತಿಯಲ್ಲಿ ಪ್ಯಾಸೆಂಜರ್ ಮತ್ತು ಗೂಡ್ಸ್ ರಿಕ್ಷಾ ನಿಲ್ದಾಣಗಳು ಹಾಗೂ ಟ್ಯಾಕ್ಸಿ ನಿಲ್ದಾಣಗಳು ಎಲ್ಲೆಂದರಲ್ಲಿ ತಲೆಯೆತ್ತುತ್ತಿದ್ದು, ಇದರಿಂದ ಖಾಸಗಿ ವಾಹನ ಮಾಲೀಕರಿಗೆ ವಾಹನ ನಿಲುಗಡೆಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಇಲಾಖೆಯ ಕ್ರಮವೇನು ; ಇವುಗಳನ್ನು ನಿಯಂತ್ರಿಸುವ ಪ್ರಾಧಿಕಾರ ಯಾವುದು ; ಅನಧಿಕೃತ ನಿಲ್ದಾಣಗಳನ್ನು ಸರ್ವೆ ಮಾಡುವ ಮೂಲಕ ನಿಯಂತ್ರಿಸಲು ಸೂಕ್ತ ನಿಯಮಾವಳಿಗಳನ್ನು ರೂಪಿಸಲಾಗುವುದೇ ; (ಮಾಹಿತಿ ನೀಡುವುದು)

(ಈ) ನಗರ ಸ್ಥಳೀಯ ಸಂಸ್ಥೆಗಳ ಹಾಗೂ ಖಾಸಗಿ ವಾಣಿಜ್ಯ ಸಂಕೀರ್ಣಗಳಲ್ಲಿ ಗ್ರಾಹಕರಿಗೆ ಸೂಕ್ತ ವಾಹನ ನಿಲ್ದಾಣಗಳಿಲ್ಲದೆ ದೂರದಲ್ಲಿ ವಾಹನ ನಿಲ್ಲಿಸಿ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಕುರಿತು ಸುವ್ಯವಸ್ಥಿತ ವಾಹನ ನಿಲ್ದಾಣ ಮಾಡಲು ಇಲಾಖೆ ಯಾವ ರೀತಿಯ ನಿಯಮಾವಳಿ ರೂಪಿಸಿದೆ ? (ವಿವರ ನೀಡುವುದು)

## ಕರ್ನಾಟಕ ರಾಜ್ಯದಲ್ಲಿ ಗಣಿಗಾರಿಕೆ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) :-**

೭೪೫ (೮೩೧) ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ರಾಜ್ಯದಲ್ಲಿ ಯಾವೆಲ್ಲಾ ರೀತಿಯ ಗಣಿಗಾರಿಕೆಯು ನಡೆಯುತ್ತಿವೆ ; ಗ್ರಾನೈಟ್, ಕಪ್ಪುಕಲ್ಲು, ಮರಳು, ಕೆಂಪು ಕಲ್ಲು ಇತ್ಯಾದಿ ವಿವಿಧ ರೀತಿಯ ಖನಿಜ ಉತ್ಪನ್ನಗಳ ಗಣಿಗಾರಿಕೆಗೆ ಅನ್ವಯಿಸುವ ನಿಯಮಗಳ ಯಾವುವು ; ಅವುಗಳನ್ನು ಕಾಲ ಕಾಲಕ್ಕೆ ತಿದ್ದುಪಡಿ ಮಾಡಲಾಗಿದೆಯೇ ; (ವಿವರ ನೀಡುವುದು)

(ಆ) ಗಣಿಗಾರಿಕೆಗಳಿಗೆ ಅನುಸರಿಸಬೇಕಾದ ನಿಯಮಗಳು ಮತ್ತು (ಸ್ಟ್ಯಾಂಡರ್ಡೈಜ್ಡ್ ಪ್ರೊಸೀಜರ್) ಪ್ರಾಮಾಣೀಕೃತ ಪ್ರಕ್ರಿಯೆಗಳಾವುವು ; ಸಲ್ಲಿಸಬೇಕಾದ ದಾಖಲೆಗಳು ಯಾವುವು ; ಯಾವೆಲ್ಲ ಇಲಾಖೆಗಳ ನಿರಾಪೇಕ್ಷಣಾ ಪತ್ರಗಳು ಅಗತ್ಯವಿದೆ ;

(ಇ) ಗಣಿಗಾರಿಕೆ ನಿಯಮಗಳನ್ನು ಪಾಲಿಸಲು ಸಾಧ್ಯವಾಗದ ರೀತಿಯಲ್ಲಿ ರಚಿಸಿ ಗಣಿಗಾರಿಕೆ ಮಾಡುವವರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಏಕ ಗವಾಕ್ಷಿ ಮೂಲಕ ಗಣಿ ಪರವಾನಿಗೆ ನೀಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು ; (ವಿವರ ನೀಡುವುದು)

(ಈ) ಗಣಿಗಾರಿಕೆ ನಿಯಮಗಳನ್ನು ಆಯಾಯ ಸ್ಥಳಕ್ಕೆ ತಕ್ಕಂತೆ ಸರಳೀಕರಿಸಿ ಯೋಗ್ಯವಾದ ರಾಜಧನ ನಿಗಧಿಪಡಿಸಿ ರಾಜ್ಯದ ಆದಾಯ ವೃದ್ಧಿಸುವ ಅವಕಾಶವನ್ನು ಸದ್ಬಳಕೆ ಮಾಡಲು ಸರ್ಕಾರ ಯೋಜಿಸಿದೆಯೇ ; (ವಿವರ ನೀಡುವುದು)

(ಉ) ಕರ್ನಾಟಕದಲ್ಲಿ ಖನಿಜ ಉತ್ಪನ್ನಗಳ ಗಣಿಗಾರಿಕೆ ವಿಧಿಸುವ ಮತ್ತು ವಸೂಲಿ ಮಾಡುವ ರಾಜ ಧನ ನಿಯಮಗಳು ಯಾವುವು ; ಅದನ್ನು ಹೇಗೆ ನಿಗಧಿಪಡಿಸಲಾಗಿದೆ ; ಕೊನೆಯದಾಗಿ ಕರ್ನಾಟಕದಲ್ಲಿ ರಾಜ ಧನ ದರವನ್ನು ಯಾವಾಗ ನಿಗಧಿ ಮಾಡಲಾಗಿತ್ತು ; ಕಳೆದ ೩ ವರ್ಷಗಳಲ್ಲಿ ವಸೂಲಿಯಾದ ರಾಜಧನ ಮೊತ್ತವೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಊ) ಕರ್ನಾಟಕದಲ್ಲಿ ಗಣಿ ಇಲಾಖೆಯಲ್ಲಿರುವ ಒಟ್ಟು ಅಧಿಕಾರಿ ಸಿಬ್ಬಂದಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಋ) ಕರಾವಳಿ ಭಾಗದಲ್ಲಿ ಕೆಂಪುಕಲ್ಲು ಕಟ್ಟಡ ನಿರ್ಮಾಣಕ್ಕೆ ಬಳಸುವ ಮುಖ್ಯ ಕಟ್ಟಡ ಸಾಮಾಗ್ರಿಯಾಗಿದ್ದು ಸರ್ಕಾರದ ತಪ್ಪು ಧೋರಣೆಯಿಂದ ಅದರ ಬೆಲೆ ವಿಪರೀತ ಹೆಚ್ಚಿರುವುದು ಸರ್ಕಾರ ಗಮನಿಸಿದೆಯೇ ?

## ಸಹಕಾರ ಇಲಾಖೆ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) :-**

೭೪೬ (೮೩೨) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಸಹಕಾರ ಸಂಘಗಳ ಕಾಯ್ದೆಯಡಿ ಸ್ಥಾಪಿಸಲಾಗುತ್ತಿರುವ ವಿವಿಧ ರೀತಿಯ ಸಹಕಾರ ಸಂಘಗಳು ಯಾವುವು ; ಇವುಗಳನ್ನು ಸ್ಥಾಪಿಸಲು ಇರುವ ನಿಯಮಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿರುವ ಸಹಕಾರ ಸಂಘಗಳ ಕಾಯ್ದೆಯಡಿ ಸ್ಥಾಪಿಸಲಾಗಿರುವ ವಿವಿಧ ರೀತಿಯ ಸಹಕಾರ ಸಂಘಗಳು ಯಾವುವು ; (ಪ್ರತ್ಯೇಕ ಮಾಹಿತಿ ನೀಡುವುದು)

(ಇ) ವಿವಿಧ ಸಹಕಾರಿ ಸಂಘ ಹಾಗೂ ಸಂಸ್ಥೆಗಳಲ್ಲಿ ಅಧಿಕಾರಿ ಸಿಬ್ಬಂದಿ ನೇಮಕಾತಿ ನಿಯಮಗಳೇನು ; ಅವರಿಗೆ ಅನ್ವಯಿಸುವ ಸೇವಾ ನಿಯಮಗಳೇನು ; (ವೇತನ ಭತ್ಯೆ ಸಹಿತ ಎಲ್ಲಾ ವಿವರಗಳನ್ನು ನೀಡುವುದು)

(ಈ) ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಸಹಕಾರ ಇಲಾಖೆಯ ಜಿಲ್ಲಾ ಕೇಂದ್ರ ಹಾಗೂ ತಾಲ್ಲೂಕು ಕೇಂದ್ರಗಳ ಕಛೇರಿಗಳಲ್ಲಿ ಅನುಮೋದಿತ ಹುದ್ದೆಗಳೆಷ್ಟು ; ಅವುಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳೆಷ್ಟು ; ಖಾಲಿ ಹುದ್ದೆಗಳೆಷ್ಟು ; ಹುದ್ದೆಗಳು ಖಾಲಿಯಿರಲು ಕಾರಣವೇನು ;

(ಉ) ಉಭಯ ಜಿಲ್ಲೆಗಳಲ್ಲಿ ಬಹಳಷ್ಟು ಹುದ್ದೆಗಳು ಖಾಲಿಯಿರುವುದರಿಂದ ಸಹಕಾರ ಕ್ಷೇತ್ರದ ಅನೇಕ ಕೆಲಸಗಳಿಗೆ ತೊಂದರೆಯಾಗಿದ್ದು, ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು ; (ವಿವರ ನೀಡುವುದು)

(ಊ) ಉಭಯ ಜಿಲ್ಲೆಗಳಲ್ಲಿ ಈವರೆಗೆ ರಾಜ್ಯ ಸರ್ಕಾರವು ಘೋಷಿಸಿದ ಕೃಷಿ ಸಾಲದ ಮೇಲಿನ ಬಡ್ಡಿ ರಿಯಾಯಿತಿ ಮೊತ್ತವೆಷ್ಟು; ಸಹಕಾರ ಸಂಘಗಳಿಗೆ ಪಾವತಿಸಲು 'ಬಾಕಿಯಿರುವ ಮೊತ್ತವೆಷ್ಟು ; ಬಾಕಿಯಿರಲು ಕಾರಣವೇನು ? (ಸಂಘವಾರು ಸಂಪೂರ್ಣ ಮಾಹಿತಿ ನೀಡುವುದು)

## ಮೈಸೂರು ನಗರಾಭಿವೃದ್ಧಿಯಲ್ಲಿ ಪ್ರಾಧಿಕಾರದಲ್ಲಿ ನಡೆದಿರುವ ಭ್ರಷ್ಟಾಚಾರ ಕುರಿತು

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :-**

೭೪೭ (೮೨೩) ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಿ (ಮುಡಾ)ದಲ್ಲಿ ಭ್ರಷ್ಟಾಚಾರ ನಡೆದಿರುವ ಕುರಿತು ತಾಂತ್ರಿಕ ಸಮಿತಿಯು ವರದಿಯನ್ನು ಸಲ್ಲಿಸಿದೆಯೇ ; ಕಳೆದ ೮ ತಿಂಗಳ ಹಿಂದೆಯೇ ಮುಡಾದಲ್ಲಿನ ನಿಯಮಬಾಹಿರ ಕ್ರಮಗಳು ಆದೇಶಗಳ ಉಲ್ಲಂಘನೆ ಪ್ರಕರಣಗಳು ಪ್ರಾಧಿಕಾರಕ್ಕೆ ಆಗಿರುವ ಆರ್ಥಿಕ ನಷ್ಟ ಇತ್ಯಾದಿಗಳನ್ನು ದಾಖಲೆ ಸಮೇತ ತಾಂತ್ರಿಕ ಸಮಿತಿಯು ಸರ್ಕಾರಕ್ಕೆ ವರದಿಯನ್ನು ಸಲ್ಲಿಕೆ ಮಾಡಿರುವುದು ನಿಜವೇ ; ಸಲ್ಲಿಸಿದ್ದಲ್ಲಿ, ವರದಿಯನುಸಾರ ಕ್ರಮ ಕೈಗೊಳ್ಳಬಹುದಿತ್ತಲ್ಲವೇ ; ಕ್ರಮ ತೆಗೆದುಕೊಳ್ಳಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ; ಸದರಿ ತಾಂತ್ರಿಕ ಸಮಿತಿ ನೀಡಿರುವ ವರದಿಯಲ್ಲಿರುವ ಅಂಶಗಳೇನು ; (ಮಾಹಿತಿ ನೀಡುವುದು)

(ಆ) ತಾಂತ್ರಿಕ ಸಮಿತಿಯು ಈ ಹಿಂದೆಯೇ ಮಧ್ಯಂತರ ಮತ್ತು ಬಿಡಿ ನಿವೇಶನಗಳನ್ನು ಬದಲಿ ನಿವೇಶನಗಳನ್ನಾಗಿ ಹಂಚಿಕೆ ಮಾಡುತ್ತಿರುವುದನ್ನು ಪತ್ತೆ ಹಚ್ಚಿ ಸರ್ಕಾರಕ್ಕೆ ವರದಿ ಮಾಡಿರುವುದು ನಿಜವೇ ; ಅನುಮೋದಿತ ವ್ಯಾಪ್ತಿಯನ್ನು ಮೀರಿ ಬಡಾವಣೆಗಳನ್ನು ಬಿಟ್ಟಿರುವುದು ನಿಜವೇ ; ಹರಾಜಿಗಾಗಿ ಬಾಕಿ ಇರುವ ಮೂಲೆ, ಬಿಡಿ ಮಧ್ಯಂತರ ನಿವೇಶನಗಳ ಮಾಹಿತಿಯು ಪ್ರತ್ಯೇಕವಾಗಿ ವಹಿಗಳಲ್ಲಿ ನಮೂದಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಮುಡಾ ಬಡಾವಣೆಗಳ ನಿರ್ಮಾಣಕ್ಕೆ ಅನುಸರಿಸುತ್ತಿರುವ ಮಾನದಂಡಗಳೇನು ; ಯಾವ ಆದೇಶಗಳಾನುಸಾರ ಕಾಯ್ದೆಗಳನುಸಾರ ಬಡಾವಣೆ ನಿರ್ಮಾಣಕ್ಕೆ ಕ್ರಮ ವಹಿಸುತ್ತಿದೆ ; ಕೃಷಿ ಭೂಮಿಯನ್ನು ವಶಕ್ಕೆ ಪಡೆದು ಬಡಾವಣೆಗಳು ನಿರ್ಮಿಸುವಲ್ಲಿ ರೂಪಿಸಿರುವ ನಿಯಮಗಳೇನು ; ಪರಿಹಾರ ನೀಡಲು ಯಾವ ನಿಯಮಗಳನ್ನು ಅನುಸರಿಸಲಾಗುತ್ತಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಇಲ್ಲಿಯವರೆಗೆ ಬಡಾವಣೆಗಳ ನಿರ್ಮಾಣಕ್ಕೆ ಎಷ್ಟು ಕೃಷಿ ಭೂಮಿಯನ್ನು ಮುಡಾ ವಶಕ್ಕೆ ಪಡೆದುಕೊಂಡು ಬಡಾವಣೆ ನಿರ್ಮಾಣ ಮಾಡಿದೆ ; ಸದರಿ ಕೃಷಿ ಭೂಮಿಗಳ ಒಡೆತನ ಹೊಂದಿರುವವರಿಗೆ ಪರಿಹಾರ ರೂಪದಲ್ಲಿ ನಿವೇಶನಗಳ ಹಂಚಿಕೆ ಮಾಡಲಾಗಿದೆಯೇ ; ಮಾಡಿದ್ದಲ್ಲಿ, ಯಾರಿಗೆ ಎಷ್ಟು ಹಂಚಿಕೆ ಮಾಡಲಾಗಿದೆ ; (ವಿವರವಾದ ಮಾಹಿತಿ ನೀಡುವುದು)

(ಉ) ಮುಡಾದಲ್ಲಿ ನಡೆದಿರುವ ಕೋಟ್ಯಾಂತರ ರೂಪಾಯಿ ಹಗರಣದ ತನಿಖೆಯನ್ನು ಕೈಗೊಳ್ಳಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ ; ತನಿಖೆಯು ಯಾವ ಹಂತದಲ್ಲಿದೆ ; ಕೋಟ್ಯಾಂತರ ರೂಪಾಯಿಯ ಈ ಹಗರಣವನ್ನು ಸಿಬಿಐ ತನಿಖೆಗೆ ಒಪ್ಪಿಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳಲು ಸರ್ಕಾರವು ಕ್ರಮ ವಹಿಸಬಹುದಲ್ಲವೇ ; ಇಲ್ಲದಿದ್ದಲ್ಲಿ, ಕಾರಣಗಳೇನು ;

(ಊ) ನಿವೇಶನ ಕೋರಿ ಸಾರ್ವಜನಿಕರಿಂದ ಮುಡಾಗೆ ಇಲ್ಲಿಯವರೆಗೆ ಎಷ್ಟು ಅರ್ಜಿಗಳನ್ನು ಸಲ್ಲಿಸಲಾಗಿದೆ ; ಎಷ್ಟು ಅರ್ಜಿಗಳು ಬಾಕಿ ಇರುತ್ತವೆ ; ಅರ್ಹರಿಗೆ ನಿವೇಶನ ನೀಡುವ ಬದಲು ಮುಡಾ ಅಧಿಕಾರಿಗಳು ಜನಪ್ರತಿನಿಧಿಗಳು ಭ್ರಷ್ಟಾಚಾರದಲ್ಲಿ ಭಾಗಿಯಾಗಿ ಜನರ ಹಿತಾಸಕ್ತಿ ಕಾಪಾಡುವಲ್ಲಿ ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಕೋಲಾರ–ಚಿಕ್ಕಬಳ್ಳಾಪುರ ಹಾಲು ಉತ್ಪಾದಕರ ಒಕ್ಕೂಟದಲ್ಲಿ ನೇಮಕಾತಿಯಲ್ಲಿ ನಡೆದ ಅಕ್ರಮದ ಕುರಿತು

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೭೪೮ (೮೨೪) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟದ ೨೦೨೩ರ ಸೆಪ್ಟೆಂಬರ್‌ನಲ್ಲಿ ನಡೆದ ನೇಮಕಾತಿಗೆ ಸಂಬಂಧಿಸಿದಂತೆ ಹುದ್ದೆಗಳ ವಿವರ, ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ವಿವರ, ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳ ವಿವರ, ಅಭ್ಯರ್ಥಿಗಳು ಗಳಿಸಿದ ಅಂಕಗಳ ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳ ವಿವರಗಳನ್ನು ಪ್ರಕಟಿಸಿರುವುದು ನಿಜವೇ ; (ಪ್ರಕಟಿಸಿದ್ದಲ್ಲಿ, ಎಲ್ಲಾ ವಿವರಗಳ ಮಾಹಿತಿ ನೀಡುವುದು)

(ಆ) ಸದರಿ ನೇಮಕಾತಿಯಲ್ಲಿ ನಡೆದಿರುವ ಅಕ್ರಮ ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ; ಜಾರಿ ನಿರ್ದೇಶನಾಲಯದ ವರದಿ ಮತ್ತು ಅವರು ಒದಗಿಸಿರುವ ಸಾಕ್ಷಿಗಳ ಆಧಾರದ ಮೇಲೆ ಅಕ್ರಮ ನೇಮಕಾತಿಯಲ್ಲಿ ಭಾಗಿಯಾದ ಅಧಿಕಾರಿಗಳು ಮತ್ತು ಇತರ ತಪ್ಪಿತಸ್ಥರ ಮೇಲೆ ದೂರು ದಾಖಲಿಸಿ ಕ್ರಮವಹಿಸಲಾಗಿದೆಯೇ ; ಇಲ್ಲದಿದ್ದಲ್ಲಿ, ಕಾರಣವೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಜಾರಿ ನಿರ್ದೇಶನಾಲಯವು ನೇಮಕಾತಿ ಹಗರಣದ ಕುರಿತು ಸಮಗ್ರ ತನಿಖೆ ಮಾಡಿ ಅಗತ್ಯ ಸಾಕ್ಷಿಗಳನ್ನು ಒದಗಿಸಿದ್ದರೂ ಕೂಡಾ ತಪ್ಪಿತಸ್ಥರ ವಿರುದ್ಧ ಸರ್ಕಾರವು ದೂರು ದಾಖಲಿಸಿ ಕ್ರಮ ತೆಗೆದುಕೊಳ್ಳದಿರಲು ಕಾರಣವೇನು ;

(ಈ) ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲಾ ಹಾಲು ಒಕ್ಕೂಟದ ಆಡಳಿತ ಮಂಡಳಿಯ ಅಧಿಕಾರಾವಧಿಯು ಮುಕ್ತಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಮುಕ್ತಾಯವಾದಲ್ಲಿ ಯಾವ ದಿನಾಂಕದಂದು ಮುಕ್ತಾಯವಾಗಿರುತ್ತದೆ ; (ವಿವರವಾದ ಮಾಹಿತಿ ನೀಡುವುದು)

(ಉ) ಸದರಿ ಹಾಲು ಒಕ್ಕೂಟದ ಅವಧಿ ಮುಗಿದ ನಂತರ ಆಡಳಿತಾಧಿಕಾರಿಯವರನ್ನು ನೇಮಕ ಮಾಡಲಾಗಿರುತ್ತದೆಯೇ ; (ಮಾಡಿದ್ದರೆ ಮಾಹಿತಿ ನೀಡುವುದು)

(ಊ) ಒಂದು ವೇಳೆ ಆಡಳಿತಾಧಿಕಾರಿಯವರನ್ನು ನೇಮಕ ಮಾಡಿಲ್ಲದಿದ್ದಲ್ಲಿ, ಯಾವ ಕಾರಣಕ್ಕಾಗಿ ಮಾಡಿರುವುದಿಲ್ಲ ? (ಎಂಬ ವಿವರಣೆ ನೀಡುವುದು)

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಘೋಷಿತ ಕೊಳಚೆ ಪ್ರದೇಶಗಳ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೪೯ (೮೨೭) ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ನಗರಸಭೆ, ಪುರಸಭೆ ಪಟ್ಟಣ ಪಂಚಾಯಿತಿಯ ಘೋಷಿತ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು ; ಇಲ್ಲಿ ವಾಸಿಸುತ್ತಿರುವ ಕುಟುಂಬಗಳ ಸಂಖ್ಯೆ ಎಷ್ಟು ;

(ಆ) ಘೋಷಿತ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ನಿವಾಸಿಗಳಿಗೆ ಹಕ್ಕು ಪತ್ರಗಳನ್ನು ನೀಡಲಾಗಿದೆಯೇ ; ನೀಡಿದ್ದಲ್ಲಿ, ಎಷ್ಟು ನಿವಾಸಿಗಳಿಗೆ ಹಕ್ಕು ಪತ್ರ ನೀಡಲಾಗಿದೆ ; (ವಿವರ ನೀಡುವುದು)

(ಇ) ಹಕ್ಕು ಪತ್ರಗಳನ್ನು ನೀಡದಿದ್ದಲ್ಲಿ, ಹಕ್ಕು ಪತ್ರಗಳನ್ನು ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು ; ಯಾವ ಕಾಲ ಮಿತಿಯೊಳಗೆ ಹಕ್ಕು ಪತ್ರ ನೀಡಲಾಗುವುದು ? (ವಿವರ ನೀಡುವುದು)

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ನಗರ ಸ್ಥಳೀಯ ಸಂಸ್ಥೆಗಳ ಒಳಚರಂಡಿ ಮತ್ತು ರಸ್ತೆ ಅಭಿವೃದ್ಧಿ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೫೦ (೮೨೬) ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ನಗರಸಭೆ, ಪುರಸಭೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಹಲವಾರು ಬಡಾವಣೆಗಳಲ್ಲಿ ಒಳಚರಂಡಿ ವ್ಯವಸ್ಥೆ ಮತ್ತು ರಸ್ತೆ ಇಲ್ಲದೇ ಸಾರ್ವಜನಿಕರು ಓಡಾಡಲು ತುಂಬಾ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಯಾವ ಯಾವ ಬಡಾವಣೆಗಳಲ್ಲಿ ಈ ಸಮಸ್ಯೆಗಳು ಕಂಡು ಬಂದಿವೆ ; ಈ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ; (ಸಂಪೂರ್ಣ ವಿವರ ನೀಡುವುದು)

(ಇ) ಸದರಿ ಜಿಲ್ಲೆಗಳಲ್ಲಿ ಬರುವ ನಗರ ಸ್ಥಳೀಯ ಸಂಸ್ಥೆಗಳ ಮೂಲಸೌಕರ್ಯ ಅಭಿವೃದ್ಧಿಗಾಗಿ ಕಳೆದ ೩ ವರ್ಷಗಳಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು ? (ವಿವರ ನೀಡುವುದು)

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಸ್ಥಳೀಯ ಸಂಸ್ಥೆಗಳ ಚುನಾಯಿತ ಗೌರವಧನದ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೫೧ (೮೨೫) ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿರುವ ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿ, ಪುರಸಭೆ, ನಗರ ಸಭೆ, ಹಾಗೂ ಇತರೆ ಸ್ಥಳೀಯ ಸಂಸ್ಥೆಗಳಿಂದ ಚುನಾಯಿತ ಪ್ರತಿನಿಧಿಗಳಿಗೆ ನೀಡುವ ಗೌರವ ಧನ ಎಷ್ಟು ;

(ಆ) ಸದರಿ ಜಿಲ್ಲೆಗಳ ಸ್ಥಳೀಯ ಸಂಸ್ಥೆಗಳ ಜನ ಪ್ರತಿನಿಧಿಗಳಿಗೆ ನೀಡುವ ಗೌರವ ಧನವನ್ನು ಸರ್ಕಾರ ಭರಿಸುತ್ತದೆಯೇ ಅಥವಾ ಸ್ಥಳೀಯವಾಗಿ ಸಂಗ್ರಹವಾಗುವ ತೆರಿಗೆಯ ಹಣದಲ್ಲಿ ನೀಡಲಾಗುತ್ತಿದೆಯೇ ; ಮಾಸಿಕ ಎಷ್ಟು ಹಣ ಬೇಕಾಗುತ್ತದೆ ; (ವಿವರ ನೀಡುವುದು)

(ಇ) ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿಗೆ ಈಗಿರುವ ಗೌರವ ಧನದ ಜೊತೆಗೆ ಬೇರೆ ಇನ್ನಿತರ ಯಾವುದಾದರೂ ಸೌಲಭ್ಯಗಳಿವೆಯೇ ಹಾಗೂ ಗೌರವ ಧನವನ್ನು ಹೆಚ್ಚಳ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ? (ವಿವರ ನೀಡುವುದು)

**ಕೆ. ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. ೦ 50/400 ಪ್ರತಿಗಳು/16–07–2024